ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 15 | ಏಪ್ರಿಲ್ 13, 1980 | 40 ಪೈಸೆ

ಜನತಾದಿಂದ ಜನಸಂಘದ ನಿರ್ಗಮನ

ಜನತಾಪಕ್ಷದಲ್ಲಿ ಕಳೆದೆರಡು ವರ್ಷಗಳಿಂದಲೂ ತೀವ್ರ ವಿವಾದ ಕೆರಳಿಸಿಟ್ಟ ದ್ವಿಸದಸ್ಯತ್ವದ ಪ್ರಶ್ನೆಯು ಈಗ ಜನತಾಪಕ್ಷದಿಂದ ಜನಸಂಘೀಯರ ನಿರ್ಗಮನದಲ್ಲಿ ಪರ್ಯವಸಾನಗೊಂಡಿದೆ. ಪಕ್ಷವನ್ನು ಬಿಟ್ಟು ಬಂದ ಜನಸಂಘದ ಸದಸ್ಯರು ಭಾರತೀಯ ಜನತಾಪಕ್ಷವೆಂಬ ಹೆಸರನ್ನು ಇಟ್ಟುಕೊಂಡು ಪ್ರತ್ಯೇಕ ಪಕ್ಷವನ್ನು ಸ್ಥಾಪನೆ ಮಾಡಿದ್ದಾರೆ. ಅದರಲ್ಲಿ ರಾಂ ಜೇತ್ಮಲಾನಿ, ಶಾಂತಿಭೂಷಣ ಮುಂತಾದ ಕೆಲವು ವ್ಯಕ್ತಿಗಳನ್ನು ಬಿಟ್ಟರೆ ಅದರಲ್ಲಿರುವವರು ಜನಸಂಘದವರೆಂಬುದು ಸ್ಪಷ್ಟವಾಗಿದೆ.

ಹಿಂದೂ ರಾಷ್ಟ್ರ ಸ್ಥಾಪನೆಯನ್ನು ಪ್ರತಿಪಾದಿಸುವ ಆರೆಸ್ಸೆಸ್ ಸಂಸ್ಥೆಯ ಸದಸ್ಯರಾಗಿರುವವರು ಜನತಾಪಕ್ಷದಲ್ಲಿರಲು ಸಾಧ್ಯವೇ ಎಂಬ ಪ್ರಶ್ನೆಯ ಬಗ್ಗೆ ತೀವ್ರವಾದ ವಿವಾದಗಳು ಜನತಾಪಕ್ಷದಲ್ಲಿ ಮೇಲಿಂದ ಮೇಲೆ ತಲೆ ಎತ್ತುತ್ತಿತ್ತು. ಈ ಪ್ರಶ್ನೆಯನ್ನೇ ಮುಂದಿಟ್ಟು ರಾಜನಾರಾಯಣ, ಚರಣಸಿಂಗ್, ಮಧುಲಿಮಯೆ ಮುಂತಾದವರು ಹೊರಬಂದು ಜನತಾ (ಎಸ್) ಎಂಬ ಪಾರ್ಟಿ ಸ್ಥಾಪಿಸಿದರು. ನಂತರ ಅದರ ಹೆಸರನ್ನು ಲೋಕದಳವೆಂದು ಬದಲಾಯಿಸಿದರು. ಕೆಲವು ವಾರಗಳ ಹಿಂದೆ ಜಗಜೀವನ್‌ರಾಂರವರೂ ಇದನ್ನೇ ಮುಂದಿಟ್ಟು ಹೊರ ಬಂದು ಜನತಾ (ಜೆ) ಎಂಬ

ಸಂಪಾದಕೀಯ

ಪಾರ್ಟಿ ಸ್ಥಾಪಿಸಿದರು. ದ್ವಿಸದಸ್ಯತ್ವದ ಪ್ರಶ್ನೆಯನ್ನು ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಬಗೆಹರಿಸಲು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಗಿ ದ್ವಿಸದಸ್ಯತ್ವವನ್ನು ನಿಷೇಧಿಸುವ ತೀರ್ಮಾನವನ್ನು ಕೊನೆಗೆ ಜನತಾ ಪಕ್ಷದ ಕಾರ್ಯಕಾರಿ ಸಮಿತಿಯು ಬಹುಮತದಿಂದ ಮಾಡಿದೆ. ಆರೆಸ್ಸೆಸ್-ಜನಸಂಘೀಯರು ಈಗ ವಿಧಿಯಿಲ್ಲದೆ ಹೊರಬರುವಂತಾಯಿತು. ತಮ್ಮದೇ ಆದ ಪಕ್ಷವನ್ನೀಗ ಸ್ಥಾಪನೆ ಮಾಡಿಕೊಂಡಿದ್ದಾರೆ. ಈಗ ಉಳಿದಿರುವ ಜನತಾಪಕ್ಷದ ಭವಿಷ್ಯವೇನೆಂಬುದನ್ನು ನಿರ್ಧರಿಸಲು ಅದರ ಸಮಾವೇಶವು ಮುಂದೆ ಸೇರಿ ತೀರ್ಮಾನಿಸಲಿದೆ. ಒಂದು ಅಧ್ಯಾಯ ಈಗ ಕೊನೆಗೊಂಡಂತಾಯಿತು. ಪ್ರಜಾಸತ್ತಾತ್ಮಕ ಶಕ್ತಿಗಳ ಹೊಂದಾಣಿಕೆಗೆ ಇದೊಂದು ಹೊಸ ಅವಕಾಶ.

ಕರ್ನಾಟಕದಲ್ಲೂ ಭಾರತೀಯ ಜನತಾಪಕ್ಷ ರಚನೆ ಮಾಡಲು ಸಂಚಾಲಕ ಎ. ಕೆ. ಸುಬ್ಬಯ್ಯನವರು ಪ್ರಯತ್ನ ನಡೆಸಿದ್ದಾರೆ. ಇದರಿಂದ ಜನತಾ ಪಕ್ಷದ ಬಲವು ಇನ್ನೂ ಕ್ಷೀಣವಾಗಲಿದೆ.

(ಕೊನೆಯ ಪುಟ ನೋಡಿ)

ಶೇಷಗಿರಿಯಪ್ಪನ ಕೊಲೆ!

ಪೋಲೀಸರಿದ್ದಾರೆ ಎಚ್ಚರಿಕೆ!!

ದೇಶಕ್ಕೆ ಸುಭದ್ರ ಸರಕಾರ ನೀಡುವುದಾಗಿ ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದ ಕಾಂಗ್ರೆ ಸರಕಾರಕ್ಕೆ ಇನ್ನೂ ನಾಲ್ಕು ತಿಂಗಳು ತುಂಬಿಲ್ಲ. ಆದರೆ ದೇಶದಾದ್ಯಂತ ಜನರ ಮನಸ್ಸಿನಲ್ಲಿ ಅಭದ್ರತೆ, ಅಶಾಂತಿ ಕಾಡುತ್ತಿದೆ. ಪಿಪ್ರಾ, ನಾರಾಯಣಪುರ, ಮಥುರಾ, ಗ್ವಾಲಿಯರ್, ನವದೆಹಲಿಯಲ್ಲಿ ನಡೆದಿರುವ ಘಟನೆಗಳು ಶ್ರೀಮತಿ ಇಂದಿರಾ ಗಾಂಧಿಯವರ ಸಮರ್ಥ ನಾಯಕತ್ವವನ್ನು ಎತ್ತಿ ತೋರಿಸುತ್ತದೆ. ಅಸ್ಸಾಂ ಚಳುವಳಿಯಂಥ ಛಿದ್ರಕಾರಿ ಘಟನೆಗಳಿಗೆ ಸದ್ಯಕ್ಕಂತೂ ಪರಿಹಾರ ಕಾಣುತ್ತಿಲ್ಲ.

ಶ್ರೀಮತಿ ಗಾಂಧಿ, ಸಂಜಯಗಾಂಧಿಯವರ ಆಪ್ತ ಭಂಟ ಶ್ರೀಮಾನ್ ಗುಂಡೂರಾಯರ ಆಡಳಿತವಿರುವ ಕರ್ನಾಟಕದಲ್ಲೂ ಶಾಂತಿಯಿಲ್ಲ. ತುರ್ತುಪರಿಸ್ಥಿತಿಯ ನಂತರ ಮತ್ತಾವುದೇ ಮುಖ್ಯ ಕೆಲಸ ಸಿಗದೆ ಕೈ ತುರಿಕೆಯಾಗುತ್ತಿದ್ದ ಪೋಲೀಸರಿಗೆ ಶ್ರೀಮತಿ ಗಾಂಧಿಯವರ ಕೃಪಾಪೋಷಿತ ಗುಂಡೂರಾವ್ ಸರಕಾರ ಅಧಿಕಾರಕ್ಕೆ ಬಂದದ್ದು ಖುಶಿಯೋ ಖುಶಿ. ಆದ್ದರಿಂದಲೇ ರಾಜ್ಯದಲ್ಲಿ ಒಂದರ ಹಿಂದೆ ಮತ್ತೊಂದು ಪೋಲೀಸ್ ಅತಿರೇಕಗಳ ಘಟನಾವಳಿ.

ಬಡವರ ಹೆಸರ್ಹೇಳಿ ಅಧಿಕಾರಕ್ಕೆ ಬಂದ ಕಾಂಗ್ರೈಗಳಿಗೆ ಬಡವರ ನೋವನ್ನು ಕೇಳಲು ವೇಳೆಯಿಲ್ಲ. ಬಡಗೇಣಿದಾರರು, ದಲಿತರು, ಮಹಿಳೆಯರು, ಜನಸಾಮಾನ್ಯರು ತಮ್ಮ ತೊಂದರೆಗಳನ್ನು ಹೇಳಿಕೊಳ್ಳಲು ಸರಕಾರದ ಪ್ರತಿನಿಧಿಗಳಾದ ಪೋಲೀಸರ ಬಳಿ ಹೋದರೆ, ಹೋದ ಬಡಪ್ರಾಣಿಯ ಪ್ರಾಣಕ್ಕೆ ಸಂಚಕಾರ!

ದಿನನಿತ್ಯ ನಡೆಯುವ ಅತ್ಯಾಚಾರ, ಶೋಷಣೆ, ಅನ್ಯಾಯ ದಬ್ಬಾಳಿಕೆಗಳಿಗೆ ಲೆಕ್ಕವಿಲ್ಲ. ಇವುಗಳಲ್ಲಿ ಕೆಲವು ಪ್ರಕರಣಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಬೆಳಕಿಗೆ ಬಂದಿರುವ ಘಟನೆಗಳನ್ನು ನೋಡಿದರೆ ಈ ದೇಶದಲ್ಲಿ ಪೋಲೀಸು, ನ್ಯಾಯಾಲಯ, ಅಧಿಕಾರ ಎಲ್ಲವೂ ಕೇವಲ ಕೆಲವೇ ಜನರ ಸೊತ್ತಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆ ಕಷ್ಟವಾಗುವುದಿಲ್ಲ.

ಮಾಲೂರು ತಾಲ್ಲೂಕು, ಹುಣಸಿಕೋಟೆ ಕುಂಬಾರ ಶೇಷಗಿರಿಯಪ್ಪನ ಕೊಲೆ ಆಗಬಹುದೆಂದು ಪೋಲೀಸರಿಗೆ ಗೊತ್ತಿದ್ದರೂ ರಕ್ಷಣೆ ಸಿಕ್ಕಿಲ್ಲ. 31-3-80 ರಂದು ಐವತ್ತೈದು ವಯಸ್ಸಿನ ಶೇಷಗಿರಿಯಪ್ಪನನ್ನು ಕೊಲೆ ಮಾಡಿದವರೆಂದು ಆರೋಪಿಸಲಾಗಿರುವ ಕೃಷ್ಣೇಗೌಡ ಮತ್ತವನ ಗುಂಪಿನವರು ಚುನಾವಣೆಗಳ ನಂತರ ಕಾಂಗ್ರೆಸ್

(ಕೊನೆಯ ಪುಟ ನೋಡಿ)

ಕಾನೂನು ಮತ್ತು ಶಿಸ್ತಿನ ಸಮಸ್ಯೆ ಇರುವುದು ಕೇರಳದಲ್ಲಲ್ಲ

ಅಸ್ಸಾಮಿನಲ್ಲಿ ಇಂದು ಆಡಳಿತ ವ್ಯವಸ್ಥೆಯೇ ಸ್ಥಗಿತಗೊಂಡಿದೆ. ಮೇಘಾಲಯ, ನಾಗಾಲೇಂಡ್‌ಗಳಂತಹ ಈಶಾನ್ಯ ಗಡಿಪ್ರದೇಶದಲ್ಲಿರುವ ರಾಜ್ಯಗಳಲ್ಲಿ ಆಡಳಿತ ವ್ಯವಸ್ಥೆ ಕುಸಿದು ಬೀಳುತ್ತಲಿದೆ. ಸುಭದ್ರ ಸರಕಾರದ ಆಶ್ವಾಸನೆ ಇತ್ತು ಅಧಿಕಾರಕ್ಕೆ ಬಂದಿರುವ ಇಂದಿರಾ ಕಾಂಗ್ರೆಸ್ಸಿಗೆ ಇವುಗಳನ್ನು ಪರಿಹಾರ ಮಾಡಲು ಅಸಾಧ್ಯವಾದಿರುವುದು ಮಾತ್ರವೇ ಅಲ್ಲ, ಇಂದು ಇಂದಿರಾ ಆಡಳಿತದಲ್ಲಿ ಪಿಪ್ರಾ ನರಹತ್ಯೆಯಂತಹ ಘಟನೆಗಳು ಬೇರೆ ಬೇರೆಡೆಗಳಲ್ಲಿ ನಡೆಯುತ್ತಿವೆ. ಪಿಪ್ರಾ, ನಾರಾಯಣಪುರ ನರಹತ್ಯೆಯಂತಹ ಘಟನೆಗಳು ಇಂದಿರಾಗಾಂಧಿ ಮತ್ತು ಜನತಾ ಪಕ್ಷದ ಕಾಲದಲ್ಲಿ ನಡೆಯುತ್ತಲಿದೆ ಆದರೆ ಕೇರಳದಲ್ಲಿ ಇವೊಂದೂ ನಡೆಯುತ್ತಿಲ್ಲ. ಅಸ್ಸಾಮಿನಂತೆ ವಿಲಿಟರಿ ಮತ್ತು ಕೇಂದ್ರ ಮೀಸಲು ಪಡೆಗಳು ಆಡಳಿತ ನಡೆಸುತ್ತಿಲ್ಲ. ಹರಿಜನ ಮತ್ತಿತರ ಹಿಂದುಳಿದ ಜನಾಂಗದ ಮೇಲೆ ದಬ್ಬಾಳಿಕೆ ನಡೆಯುತ್ತಿಲ್ಲ. ಕಾನೂನು ಮತ್ತು ಶಿಸ್ತಿನ ಸಮಸ್ಯೆ ಇರುವುದು ಕೇರಳಕ್ಕಲ್ಲ ಎಂಬುದಾಗಿ ಕೇರಳದ ಮುಖ್ಯ ಮಂತ್ರಿ ಕಾಂ. ಇ.ಕೆ. ನಯನಾರ್ ಅವರು 9-4-80ರಂದು ಸಂಜೆ ಮಂಗಳೂರಿನ ನೆಹರೂ ಮೈದಾನಿನಲ್ಲಿ ಜಿಲ್ಲಾ ಸಿ. ಐ. ಟಿ. ಯು.ವಿನ ಸಮ್ಮೇಳನದ ಮುಕ್ತಾಯ ಸಮಾರಂಭದ ಅಂಗವಾಗಿ ಸೇರಿದ್ದ ಭಾರಿ ಸಾರ್ವಜನಿಕ ಸಭೆಯಲ್ಲಿ ಘೋಷಿಸಿದರು.

ಕೇರಳದಲ್ಲೂ ಶೋಷಣೆ ಇಲ್ಲವೆಂದಲ್ಲ. ಆದರೆ ಶೋಷಣೆಗೊಳಗಾದ ಜನತೆ, ರೈತರು, ಕಾರ್ಮಿಕರು, ಕೃಷಿ ಕೂಲಿಗಾರರು ಮತ್ತು ಇತರೆಲ್ಲಾ ದುಡಿಯುವ ಜನರೂ ಒಗ್ಗಟ್ಟಾಗಿ ಸಂಘಟಿಸಿ ಹೋರಾಡಿ ನ್ಯಾಯ ಪಡೆಯಲು ನಮ್ಮ ಸಂಗಾತಿಗಳು ಸಹಾಯ ವೆಸಗುತ್ತಲಿರುವರು. ಕೇವಲ ಇದಿರುವ ಆಡಳಿತ ವ್ಯವಸ್ಥೆಯಿಂದಲೇ ಇದು ಸಾಧ್ಯವಿಲ್ಲ ಎಂದರು ಕಾಂ. ಇ. ಕೆ. ನಯನಾರ್.

ಲೋಕಸಭಾ ಚುನಾವಣೆಯಲ್ಲಿ ಸುಮಾರು ಶೇ. 45ರಷ್ಟು ಮತ ಪಡೆದು ಶೇ. 60 ಕ್ಕಿಂತಲೂ ಹೆಚ್ಚಿಗೆ ಸ್ಥಾನ ಗಳಿಸಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಇಂದಿರಾಗಾಂಧಿ ಅವರು ತುರ್ತಾಗಿ ಕೇರಳಕ್ಕೆ ಬಂದು ಅಸೆಂಬ್ಲಿ

ಕಾಂ. ಇ. ಕೆ. ನಯನಾರ್

ಚುನಾವಣೆಯಲ್ಲಿ ಎಡ ಪ್ರಜಾಪ್ರಭುತ್ವ ರಂಗವನ್ನು ಸೋಲಿಸಲು ಬಹಳ ಪ್ರಯತ್ನ ಪಟ್ಟರು. ದೇವಸ್ಥಾನ, ಮಠಗಳ ಸಂದರ್ಶನವೂ ನಡೆಯಿತು. ಆದರೆ ಕೇರಳದ ಜನತೆ ಸರ್ವಾಧಿಕಾರಿ ಶಕ್ತಿಯ ಸವಾಲನ್ನು ಎದುರಿಸಿ, ಎಡ ಪ್ರಜಾಪ್ರಭುತ್ವ ರಂಗಕ್ಕೆ ಭಾರಿ ಜಯ ದೊರಕಿಸಿತು. ಕೇಂದ್ರದಲ್ಲಿ ಇಂದಿರಾಗಾಂಧಿಯವರಿಗೆ ಬಹುಮತ ಬಂದಿರುವುದನ್ನು ನಾವು ಒಪ್ಪುತ್ತೇವೆ. ಹಾಗೆಯೇ ಕೇರಳದಲ್ಲಿ ನಮಗೆ ಬಹುಮತ ಬಂದಿರುವುದನ್ನು ಒಪ್ಪಿಕೊಂಡು, ಸರಕಾರವನ್ನು ಉರುಳಿಸುವ ತಂತ್ರವನ್ನು ಕೈಬಿಡಬೇಕೆಂದು ಹೇಳಿದರು ಮುಖ್ಯಮಂತ್ರಿಯವರು. ಘಟನೆಯೆಂಬುದು ಏನೆಂದು ತಿಳಿಯದೇ ಇರುವ ಸ್ಟೀಫನ್ ಅಂತಹವರು ಘಟನೆಯನ್ನು ನಾವು ವಿರೋಧಿಸುತ್ತೇವೆ ಎಂದು ಹೇಳುವುದನ್ನು ಗೇಲಿ ಮಾಡಿದ ನಯನಾರ್ ಅವರು ರಾಜ್ಯದ ದುಡಿಯುವ ಜನ ಮತ್ತು ಜನಹಿತ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಸಾಕಷ್ಟು ಆರ್ಥಿಕ ಸಹಾಯವನ್ನು ನೀಡಲು ಕೇಂದ್ರಕ್ಕೆ ಒತ್ತಾಯಿಸಿದರು.

ಬಂಡವಾಳಶಾಹಿ- ಭೂಮಾಲಕ ವ್ಯವಸ್ಥೆಯು ತೀವ್ರವಾದ ಬಿಕ್ಕಟ್ಟಿಗೊಳಗಾಗಿದ್ದು, ಈ ಸಂದರ್ಭದಲ್ಲಿ ಜನತೆಯ ಗಮನವನ್ನು ಬೇರೆಡೆಗೊಯ್ಯಲು "ಮಣ್ಣಿನ ಮಕ್ಕಳ"ವಾದದಂತಹ ವಾದಗಳನ್ನು ಮುಂದೂಡಲಾಗುತ್ತಿದೆ. ಕರ್ನಾಟಕದ ಮುಖ್ಯಮಂತ್ರಿಯವರು ಈ ಬಗ್ಗೆ ಗದ್ದಲ ಮಾಡುತ್ತಿದ್ದುದನ್ನು ನೆನಪಿಗೆ ತಂದು, ಇದರ ಬಗ್ಗೆ ಇಂದಿರಾ ಗಾಂಧಿಯವರೇ ಛೀಮಾರಿ ಹಾಕಿದ್ದನ್ನು ಪ್ರಸ್ತಾಪಿಸಿದರು. ಅಸ್ಸಾಂ ಅಸ್ಸಾಮಿನ ಜನತೆಗೆ ಎಂಬ ವಾದಕ್ಕೆ ಬೆಂಬಲವಿತ್ತ ಕಾಂಗ್ರೈಗೆ ಈಗ ಅಸ್ಸಾಂ ಚಳುವಳಿಯನ್ನು ಹತೋಟಿಗೆ ತರುವುದೇ ಅಸಾಧ್ಯವಾಗಿದೆ. ಆರ್.ಎಸ್.ಎಸ್. ನಂತಹ ಪ್ರತಿಗಾಮಿ ಶಕ್ತಿಗಳು ಈ ಚಳುವಳವನ್ನು ತಪ್ಪುದಾರಿಗೆಳೆಯುತ್ತಲಿದ್ದಾರೆ. ಸ್ವಾತಂತ್ರ್ಯ ದೊರೆತ ಮೇಲೆ ಆಡಳಿತ ನಡೆಸಿದ ಆಳುವ ಪಕ್ಷಗಳಿಗೆ ಉದ್ಯೋಗವನ್ನು ಎಲ್ಲರಿಗೂ ಒದಗಿಸಲು ಆಗದೆ ಇದ್ದುದೇ ಈ ಸಮಸ್ಯೆಗಳ ಮೂಲಕಾರಣವೆಂದ ಮುಖ್ಯ ಮಂತ್ರಿಯವರು, ದೇಶವಿಂದು ಛಿದ್ರವಾಗುವುದರಲ್ಲಿದೆ ಎಂದರು.

(ಕೊನೆಯ ಪುಟ ನೋಡಿ)

ಒಕ್ಕೂಟ ಸಮಿತಿಯ ಆಶ್ರಯದಲ್ಲಿ ಬೃಹತ್ ಮೆರವಣಿಗೆ

ದಿನಾಂಕ 3-4-1974 ರಂದು ನಗರದ ವಿವಿಧ ಕಡೆಗಳಿಂದ ಕಾರ್ಮಿಕರ ಮೆರವಣಿಗೆ ಹೊರಟು ಸಂಜೆ 6 ಗಂಟೆಗೆ ಕಬ್ಬನ್ ಪಾರ್ಕನ್ನು ತಲುಪಿ ಈ ಕೆಳಕಂಡ ಕೇಳಿಕೆಗಳ ಈಡೇರಿಕೆಗೆ ಸರ್ಕಾರವನ್ನು ಮತ್ತು ಮಾಲೀಕ ವರ್ಗವನ್ನು ಒತ್ತಾಯಿಸಿ ಬೃಹತ್ ಬಹಿರಂಗ ಸಭೆ ನಡೆಸಿತು.

1) 'ಸಂಯುಕ್ತ ಕರ್ನಾಟಕ' ಕನ್ನಡ ದಿನಪತ್ರಿಕೆಯನ್ನು ಮಾಲೀಕ ವರ್ಗ ಸುಮಾರು 3 ತಿಂಗಳ ಹಿಂದೆ ಅಕ್ರಮವಾಗಿ ಮುಚ್ಚಿ ಸುಮಾರು 210 ಜನ ಕಾರ್ಮಿಕರನ್ನು ಬೀದಿಪಾಲು ಮಾಡಿರುವುದನ್ನು ಉಗ್ರವಾಗಿ ಖಂಡಿಸಿ, ಸರ್ಕಾರ ಕೂಡಲೇ ಮುದ್ರಣಾಲಯದ ಕಾರ್ಯಕ್ರಮವನ್ನು ಪ್ರಾರಂಭಿಸುವಂತೆ ಸೂಕ್ತವ್ಯವಸ್ಥೆ ಮಾಡಬೇಕು.

2) ಇಂಡಿಯನ್ ಟೊಬ್ಯಾಕೊ ಕಂಪನಿಯ (I.T.C.) ಮಾಲೀಕರು ಕಾರ್ಮಿಕರಿಗೆ ದ್ರೋಹ ಬಗೆದು ಮಾಲೀಕರನ್ನು ಪ್ರತಿಬಿಂಬಿಸುವ ಅಲ್ಪ ಸಂಖ್ಯಾತ ಕಾರ್ಮಿಕರೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡಿರುವುದನ್ನು ವಿರೋಧಿಸಿ ಕೂಡಲೆ ಶೇ. 95 ಜನ ಕಾರ್ಮಿಕರನ್ನು ಪ್ರತಿಬಿಂಬಿಸುವ ಸಂಘವನ್ನು ಮಾಲೀಕರು ಮಾನ್ಯತೆ ಮಾಡಿ ಅವರೊಡನೆ ಒಪ್ಪಂದವನ್ನು ಮಾಡಬೇಕೆಂದು ಒತ್ತಾಯಿಸಿತು. ಮಾಲೀಕರು ಸುಮಾರು ಒಂದು ತಿಂಗಳಿಂದ ಯಾವ ಒಪ್ಪಂದಕ್ಕೂ ಬರದೆ ಇರುವುದನ್ನು ವಿರೋಧಿಸಿ ಸುಮಾರು ಶೇ. 95 ಭಾಗ ಕಾರ್ಮಿಕರು (2200 ಕಾರ್ಮಿಕರಲ್ಲಿ) ಮುಷ್ಕರ ಹೂಡಿದ್ದಾರೆ. ಮಾಲೀಕರು ಕೆಲವು ಏಜಂಟು ಕಾರ್ಮಿಕರೊಡನೆ ಕೆಲಸಮಾಡಿಸಲು ಪ್ರಯತ್ನಿಸುತ್ತಿರುವುದನ್ನು ಸಭೆ ಖಂಡಿಸಿತು.

ಕಾರ್ಖಾನೆಯ ಬಳಿ ಪೋಲೀಸ್ ಕಮಿಷನರ್‌ರವರು ಸೆಕ್ಷ 35 ಹಾಕಿ, ಕಾರ್ಮಿಕರ ಹೋರಾಟವನ್ನು ದಮನ ಮಾಡುತ್ತಿರುವುದನ್ನು ಸಭೆ ವಿರೋಧಿಸಿ ನಿರ್ಣಯವನ್ನು ಮಾಡಿತಲ್ಲದೆ, ಸರ್ಕಾರ ಕೂಡಲೇ ಮಾಲೀಕರಿಗೆ ಸೂಕ್ತ ನಿರ್ದೇಶನ ಕೊಟ್ಟು ಶೇ. 95 ಜನ ಕಾರ್ಮಿಕರನ್ನು ಪ್ರತಿಬಿಂಬಿಸುವ ಸಂಘವನ್ನು ಮಾನ್ಯತೆಮಾಡಿ ಒಪ್ಪಂದ ಮಾಡಬೇಕೆಂದು ನಿರ್ಣಯ ಮಾಡಲಾಯಿತು.

'ಯುನೈಟೆಡ್ ಬ್ರೀವರೀಸ್'

ಈ ಕಾರ್ಖಾನೆಯಲ್ಲಿ ಶ್ರಮಭಾರದ (Work Load) ವಿರುದ್ಧ ಮತ್ತು ಕ್ಯಾಂಟೀನ್ ಸೌಲಭ್ಯಬೇಕೆಂದು ಕೆಲಸಗಾರರು ಕೇಳಿಕೊಂಡಾಗ ಮಾಲೀಕರ ಪರವಾಗಿ ಇದ್ದ ಸೂಪರ್‌ವೈಸರ್ ಹಾಗೂ ಒಬ್ಬ ಕಾರ್ಮಿಕನ ನಡುವೆ ಜಗಳ ಆಗಿ ಸೂಪರ್‌ವೈಸರ್ ಕಾರ್ಮಿಕನನ್ನು ಬೂಟು ಕಾಲಿನಿಂದ ಒದ್ದ ಪ್ರಸಂಗವನ್ನು ಕಾರ್ಮಿಕ ಸಂಘ ಉಗ್ರವಾಗಿ ಖಂಡಿಸಿತು. ಇಷ್ಟೇ ಅಲ್ಲದೆ ಮಾಲೀಕರು ಕೆಲಸಗಾರನನ್ನು ಸಸ್ಪೆಂಡ್ ಮಾಡಿ, ಸೂಪರ್‌ವೈಸರ್‌ನ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲದಿರುವುದನ್ನು ವಿರೋಧಿಸಿ ಸುಮಾರು 1 ತಿಂಗಳಿನಿಂದ ಮುಷ್ಕರ ನಡೆಸುತ್ತಿದ್ದಾರೆ, ಲೇಬರ್ ಇಲಾಖೆಯವರು ಮಾಲೀಕರಿಗೆ ಶಾವು ಮಾಡಿದ್ದು ಸರಿ ಇಲ್ಲವೆಂದು ತಿಳಿಸಿದ್ದರೂ ಮಾಲೀಕರು ಅದಕ್ಕೆ ಸೊಪ್ಪು ಹಾಕುತ್ತಿಲ್ಲ ಆದ್ದರಿಂದ ಸಸ್ಪೆಂಡ್ ಆದ ಕೆಲಸಗಾರನ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಆತನನ್ನು ಕೆಲಸಕ್ಕೆ ತೆಗೆದುಕೊಂಡು, ಸೂಪರ್‌ವೈಸರ್ ಕ್ಷಮೆ ಕೇಳಿಕೊಂಡರೆ ಮಾತ್ರ ಕೆಲಸ ಪ್ರಾರಂಭಿಸುವುದಾಗಿ ಕಾರ್ಮಿಕ ಸಂಘ ನ್ಯಾಯರೀತಿ ಹೋರಾಟಮಾಡುತ್ತಿದೆ.

4) ತಾತಗುಣಿ ಎಸ್ಟೇಟ್ ಕಾರ್ಮಿಕರ ಹೋರಾಟವನ್ನು ಸರ್ಕಾರ ಕೂಡಲೇ ಇತ್ಯರ್ಥಗೊಳಿಸಬೇಕು.

ಈ ಮೇಲ್ಕಂಡ 4 ಹೋರಾಟಗಳನ್ನು ಬೆಂಬಲಿಸಿ ಅಂದು ನಡೆದ ಬೃಹತ್ ಕಾರ್ಮಿಕರ ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಖಂಡರಾದ ಕಾಂ. ಸೂರ್ಯನಾರಾಯಣರಾವ್ (ಸಿ ಐ. ಟಿ. ಯು.), ಕಾಂ. ರಾಜಗೋಪಾಲ್ (ಹಿಂದೂ ಮಜ್ದೂರ್ ಪಂಚಾಯತ್) ಕಾಂ. ಸುಬ್ರಮಣಿ (ಅಧ್ಯಕ್ಷ, ಯುನೈಟೆಡ್ ಬ್ರೀವರೀಸ್ ಎಂಪ್ಲಾಯೀಸ್ ಯೂನಿಯನ್), ಕಾಂ. ಕೆ. ವಿ ಶ್ರೀನಿವಾಸ್ (ಜೀವವಿಮಾ ನೌಕರರ ಸಂಘ) ಮುಂತಾದವರು ಮಾತನಾಡಿದರು.

ಪ್ರಾರಂಭದಲ್ಲಿ ಸಿ. ಐ. ಟಿ. ಯು. ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾಂ. ಟಿ ಎಸ್. ಅನಂತರಾಂ ಸ್ವಾಗತಿಸುತ್ತಾ ಅಂದಿನ ಸಭೆಯ ಉದ್ದೇಶವನ್ನು ವಿವರಿಸಿದರು. ಕಾಂ. ಶ್ರೀನಿವಾಸ್ (ಸಿ. ಐ. ಟಿ. ಯು) ವಂದಿಸಿದರು.

ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಕಾಂ. ಅರ್ಜುನ್‌ದೇವ್ ವಹಿಸಿದ್ದರು.

○

ಹೆಸರು ಬದಲಾಯಿಸಿ ಗ್ರಾಂಟು ತಡೆ

ಕೊಳ್ಳೇಗಾಲ ಪಟ್ಟಣದ ಹರಿಜನರಾದ ಸಿ. ಚಿಕ್ಕಲಿಂಗಯ್ಯ ಅವರಿಗೆ ಮನೆ ಕಟ್ಟಿಕೊಳ್ಳಲು ಹಿಂದೆ ಸರ್ಕಾರವು ಜಮೀನನ್ನು ಕೊಟ್ಟಿತು. ಮುನಿಸಿಪಾಲಿಟಿಯವರು ಮನೆಕಟ್ಟಲು ಸಾಲ ಕೊಡುತ್ತಾರೆಂದು ತಿಳಿದ ಅವರು ಅರ್ಜಿಯನ್ನು ಸಲ್ಲಿಸಿದ್ದರು. ಜನವರಿ 30ರಂದು ನಡೆದ ಪುರಸಭೆಯ ಮೀಟಿಂಗಿನಲ್ಲಿ ಚಿಕ್ಕಲಿಂಗಯ್ಯನವರ ಹೆಸರಿಗೆ ಸಾಲ ಗ್ರಾಂಟು ಮಂಜೂರಾಗಿತ್ತು (ಸೀರಿಯಲ್ ನಂಬರ್ 17). ಫೆಬ್ರುವರಿಯಲ್ಲಿ ಪುರಸಭೆಯ ಎಂಜಿನಿಯರು ಮತ್ತು ನೌಕರನು ಬಂದು ಅವರ ಖಾಲಿ ಸೈಟನ್ನು ಅಳತೆಮಾಡಿಕೊಂಡು ಹೋಗಿದ್ದರು. ನಂತರ ಕಚೇರಿಗೆ ಕರೆಸಿ, ಸಂಬಂಧಪಟ್ಟ ಕಾಗದ ಪತ್ರದ ಕೈಬರಹ ತೆಗೆದುಕೊಂಡಿದ್ದರು. ಮಾರ್ಚಿ ತಿಂಗಳಲ್ಲಿ ಐದು ರೂಪಾಯಿನ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದುಕೊಂಡು ಚಿಕ್ಕಲಿಂಗಯ್ಯನವರು ಪುರಸಭೆ ಕಚೇರಿಗೆ ಹೋದಾಗ ಗ್ರಾಂಟು ನಿಮಗೆ ಇಲ್ಲವೆಂದು ಹೇಳಲಾಯಿತು. ಪುರಸಭೆ ಮೀಟಿಂಗಿನ ಗೊತ್ತುವಳಿ ಪುಸ್ತಕ ತೆಗೆದು ನೋಡಲಾಗಿ, ಅದರಲ್ಲಿ ಸೀರಿಯಲ್ ನಂಬರ್ 17ರಲ್ಲಿದ್ದ ಚಿಕ್ಕಲಿಂಗಯ್ಯನವರ ಹೆಸರು ಹೊಡೆದು ಹಾಕಿ ಚಂದೀಮಶೆಟ್ಟಿ ಎಂದು ಬರೆದಿತ್ತು. ಪುರಸಭೆಯ ಅಧ್ಯಕ್ಷರು ತಮ್ಮ ಅಧಿಕಾರವನ್ನು ದುರುಪಯೋಗಿಸಿ, ಮೀಟಿಂಗಿನ ಗೊತ್ತುವಳಿಯನ್ನು ತಮಗೆ ಬೇಕಾದವರ ಹೆಸರಿಗೆ ಬದಲಾಯಿಸಿದ್ದಾರೆ. ಪುರಸಭೆಯ ನಿಯಮಗಳಿಗೆ ಅವಮಾನ ಮಾಡಿದ್ದಾರೆ. ಹರಿಜನರಾದ ಚಿಕ್ಕಲಿಂಗಯ್ಯ, ನ್ಯಾಯಕೋರಿ ಉನ್ನತ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದಾರೆ. ದಲಿತರ ಪರವಾಗಿ ಹೋರಾಡುತ್ತಿರುವ ಸಂಘಟನೆಗಳು ಈ ಬಗ್ಗೆ ಗಮನ ಹರಿಸಬೇಕಾಗಿದೆ. ಮತ್ತು ಹೋರಾಟ ನಡೆಸಬೇಕಾಗಿದೆ.

●

ಪ್ಲೈವುಡ್ ನೌಕರರಿಂದ ಮುಷ್ಕರ

ಧಾರವಾಡದ ಇಂಡಿಯನ್ ಪ್ಲೈವುಡ್ ಕಂಪೆನಿಯ 500 ಕಾರ್ಮಿಕರು ತಮಗೆ ಸರ್ಕಾರ ನಿಗದಿಪಡಿಸಿದ್ದ ಕನಿಷ್ಠ ವೇತನದ ಬೇಡಿಕೆ ಒತ್ತಾಯಿಸಲು ಅನ್ನ ಸತ್ಯಾಗ್ರಹ ಮತ್ತು ಮುಷ್ಕರ ನಡೆಸುತ್ತಿದ್ದಾರೆ. ಮಾಲೀಕರು ಮತ್ತು ಸಂಘದ ಮುಖಂಡರ ನಡುವೆ ಮಾತುಕತೆ ವಿಫಲವಾಗಿದೆ. ಹೋರಾಟಕ್ಕೆ ಎಲ್ಲ ಪ್ರಗತಿಪರ ಸಂಘಟನೆಗಳ ಬೆಂಬಲ ಕೋರಲಾಗಿದೆ.

○

ಪಕ್ಷದ ಸದಸ್ಯರ ದಸ್ತಗಿರಿಗೆ ಪಿ. ಬಿ. ಖಂಡನೆ

ಜಮ್ಮು ಮತ್ತು ಕಾಶ್ಮೀರದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಂಘಟನಾ ಕಾರ್ಯದರ್ಶಿ ಮಹಮದ್ ಯೂಸುಫ್ ಅವರೂ ಸೇರಿದಂತೆ ಅನೇಕ ಸದಸ್ಯರನ್ನು ಶೇಖ್ ಅಬ್ದುಲ್ಲಾ ಸರ್ಕಾರ ದಸ್ತಗಿರಿ ಮಾಡಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಉಗ್ರವಾಗಿ ಖಂಡಿಸಿದೆ.

ಭುಟ್ಟೋ ಅವರ ನೇಣಿನ ಮೊದಲ ವರ್ಷಾಚರಣೆಯ ದಿನದಂದು ಅವರು ಹಿಂಸೆಯನ್ನು ಉದ್ದೇಶಿಸಿದ್ದರೆಂದು ಕೊಟ್ಟಿರುವ ದಸ್ತಗಿರಿ ಕಾರಣವು ಯಾರೂ ನಂಬುವಂತಿಲ್ಲ. ಹೋದ ವರ್ಷ ಭುಟ್ಟೋ ನೇಣನ್ನು ಪ್ರತಿಭಟಿಸಿದಾಗ ಯೂಸುಫ್ ಅವರ ದಸ್ತಗಿರಿ ನ್ಯಾಯಬಾಹಿರ ಎಂದು ಶ್ರೇಷ್ಠ ನ್ಯಾಯಾಲಯ ತಡೆಹಿಡಿದಿತ್ತು.

ಜಮಾತ್-ಎ-ಇಸ್ಲಾಮಿ ಸಂಸ್ಥೆ ಜಮ್ಮು ಮತ್ತು ಕಾಶ್ಮೀರದ ಆಡಳಿತದಲ್ಲಿ ನುಸುಳಿ, ನ್ಯಾಷನಲ್ ಕಾನ್‌ಫರೆನ್ಸ್ ಜೊತೆ ತುಂಬ ಹತ್ತಿರದ ಸಂಬಂಧ ಹೊಂದಿದೆ. ಈ ಮತೀಯ ಸಂಸ್ಥೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಕಮ್ಯುನಿಸ್ಟ್ ಪಕ್ಷಗಳ ಮೇಲೆ ಹಲ್ಲೆ ನಡೆಸುತ್ತಿದೆ.

ಯಾವ ವಿಚಾರದ ಬಗ್ಗೆಯೇ ಆಗಲಿ ಪ್ರತಿಭಟನೆ ನಡೆಸುವ ಹಕ್ಕನ್ನು ನಮ್ಮ ಪಕ್ಷ ರಕ್ಷಿಸುತ್ತದೆ. ಅದು ಲೂಟಿ, ಗಲಭೆಗಳನ್ನು ನಡೆಸುವುದಿಲ್ಲ. ಪಕ್ಷದ ಕಾಮ್ರೇಡುಗಳ ಬಿಡುಗಡೆಗೆ ಪೊಲಿಟ್‌ಬ್ಯೂರೋ ಒತ್ತಾಯಿಸುತ್ತದೆ.

●

ಸಿನಿಮಾ ನೌಕರರ ಪ್ರದರ್ಶನ

ಮೈಸೂರಿನ ಸಂಗಮ್ ಟಾಕೀಸಿನಲ್ಲಿ ಮಾರ್ಚಿ 22ರಂದು ಯಾವ ತಿಳುವಳಿಕೆಯೂ ಇಲ್ಲದೆ ಮಜಾ ಆದ ಕೆಲಸಗಾರನ ಪರವಾಗಿ ಆಡಳಿತ ವರ್ಗದೊಡನೆ ಮಾತುಕತೆ ನಡೆದಿತ್ತು. ಆದರೆ ಮಾತುಕತೆಯ ತೀರ್ಮಾನಗಳನ್ನು ಜಾರಿಗೊಳಿಸಲು ಮಾಲೀಕರು ವಿಳಂಬ ಮಾಡುತ್ತಿರುವುದನ್ನು ಪ್ರತಿಭಟಿಸಿ ಏಪ್ರಿಲ್ 4 ರಂದು ಪ್ರದರ್ಶನ ನಡೆಸಲಾಯಿತು. ಟಾಕೀಸಿನ ಬಳಿ ನಡೆದ ಈ ಪ್ರದರ್ಶನದ ಮೇಲೆ ಪೋಲೀಸರು ದಾಳಿನಡೆಸಿ, ಪ್ರದರ್ಶನವನ್ನು ತಡೆದರು. ಮೈಸೂರು ಎಂಪ್ಲಾಯೀಸ್ ಯೂನಿಯನ್ನಿನ ಕಾರ್ಯದರ್ಶಿ ಎಂ. ಶೇಖರ್ ಮತ್ತಿತರರನ್ನು ದಸ್ತಗಿರಿ ಮಾಡಿದರು. ಈ ದೌರ್ಜನ್ಯವನ್ನು ಸಿ. ಐ. ಟಿ. ಯು. ಗೆ ಸೇರಿದ ಎಲ್ಲಾ ಕಾರ್ಮಿಕ ಸಂಘಗಳು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೈಸೂರು ಜಿಲ್ಲಾ ಘಟಕ ಖಂಡಿಸಿವೆ.

○

ಮುಳುಬಾಗಿಲು ಬಂದ್

ಮಾರ್ಚ್ 26ರಂದು ಬುಧವಾರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ರೈತಸಂಘದ ಕರೆಯ ಮೇರೆಗೆ ಸಾರ್ವಜನಿಕರ ಸಹಕಾರದಿಂದ ಸಂಪೂರ್ಣ ಯಶಸ್ವಿ ಬಂದ್‌ನ್ನು ಕೋಲಾರ ಜಿಲ್ಲೆಯ ಮುಳುಬಾಗಿಲಿನಲ್ಲಿ ಆಚರಿಸಲಾಯಿತು.

ಸರ್ಕಾರವು ಮನೆಕಂದಾಯವನ್ನು ಐದು ಪಟ್ಟು ಹೆಚ್ಚಿಸಿರುವುದನ್ನು ವಾಪಸ್ ಇಳಿಸಬೇಕೆಂದು, ನಾಗರೀಕರಿಗೆ ಸರಿಯಾದ ನೀರಿನ ಮತ್ತು ವಿದ್ಯುಚ್ಛಕ್ತಿ ಸೌಕರ್ಯವನ್ನು ಒದಗಿಸಬೇಕೆಂದು, ಮುಳಬಾಗಿಲು ಪಟ್ಟಣದ ಚರಂಡಿಗಳನ್ನು ಸರಿಪಡಿಸಿ ಶುಚಿತ್ವವನ್ನು ಕಾಪಾಡಬೇಕೆಂದು, ಪುರಸಭೆಯ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಬೇಕೆಂದು ಒತ್ತಾಯಿಸಿ ಪಟ್ಟಣದ ರಸ್ತೆಗಳಲ್ಲಿ ರೈತರು, ಸಾರ್ವಜನಿಕರು ಅಧಿಕ ಸಂಖ್ಯೆಯಲ್ಲಿ ಮೆರವಣಿಗೆ ಹೊರಟು ತಹಶೀಲ್ದಾರ್‌ರವರಿಗೆ ಬೇಡಿಕೆಗಳ ಮನವಿ ಪತ್ರವನ್ನು ಸಲ್ಲಿಸಲಾಯಿತು. ನಂತರ ನಡೆದ ಭಾರಿ ಬಹಿರಂಗ ಸಭೆಯಲ್ಲಿ ತಾಲ್ಲೋಕು ರೈತಸಂಘದ ಕಾರ್ಯದರ್ಶಿ ಕಾಂ. ದೇವರಾಜ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರಾದ ಹಾಗೂ ಪ್ರಸಿದ್ಧ ವಕೀಲರಾದ ಆರ್. ವೆಂಕಟರಾಮಯ್ಯ, ಶ್ರೀ ತಿಪ್ಪಣ್ಣ, ಶ್ರೀ ರಾಮಕೃಷ್ಣ ಮುಂತಾದವರು ಮಾತನಾಡಿದರು.

ಈ ಕಾರ್ಯಕ್ರಮದ ಅಂಗವಾಗಿ ನೀಡಿದ್ದ 'ಬಂದ್' ಕರೆಗೆ ಸಾರ್ವಜನಿಕರು ಪೂರ್ಣ ಬೆಂಬಲ ಕೊಟ್ಟು ಯಶಸ್ವಿ ಮಾಡಿದರು.

○

ಸಮನ್ವಯ ಸಮಿತಿ ಸಭೆ

ಬದಲಾದ ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸಲು ತಾ. 25-3-80ರಂದು ವಿರಾಜಪೇಟೆಯಲ್ಲಿ ಸಭೆ ಸೇರಿದ್ದ ಮಹಿಳಾ ಸಮನ್ವಯ ಸಮಿತಿ ತೀರ್ಮಾನಿಸಿದೆ.

ಕಾಂ. ಜಾನಕಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆ ಬೆಲೆಏರಿಕೆ, ಎಲ್ಲಾ ಕ್ಷೇತ್ರಗಳಲ್ಲಿ ಬೆಳೆಯುತ್ತಿರುವ ಮಹಿಳಾ ಶೋಷಣೆಯ ಬಗ್ಗೆ ತನ್ನ ಕಳವಳವನ್ನು ವ್ಯಕ್ತಪಡಿಸಿದ ಸಮಿತಿ, ಸರಕಾರ ಈ ಬಗ್ಗೆ ಕೂಡಲೇ ಕ್ರಮ ವಹಿಸಬೇಕೆಂದು ಒತ್ತಾಯಿಸಿ ಒಂದು ಮನವಿಯನ್ನು ಅರ್ಪಿಸಿದರು.

ಕೊನೆಯಲ್ಲಿ ಕೆಳಕಂಡವರನ್ನು ಪದಾಧಿಕಾರಿಗಳನ್ನಾಗಿ ಆರಿಸಲಾಯಿತು. ಅಧ್ಯಕ್ಷಿಣಿ: ಕಾಂ. ಕುಂಞಮ್ಮಲಾಜರ್, ಕಾರ್ಯದರ್ಶಿ: ಕಾಂ. ಪ್ರಭಾಚಂದ್ರ, ಸಹಕಾರ್ಯದರ್ಶಿ : ಕಾಂ ಮೀನ.

○

ಆರ್ಥಿಕ ಸಮೀಕ್ಷೆ:

ಆರ್. ಚಂದ್ರ

ರಾಷ್ಟ್ರದ ಸಂಪತ್ತು ಯಾರ ಕೈಗೆ ಸೇರುತ್ತಿದೆ?

ಭದ್ರ ಸರಕಾರ ಬರಬೇಕು, ಬೆಲೆ ಇಳಿಸಬೇಕು, ಸಂಘಟಿತ ಕಾರ್ಮಿಕರ ಸದ್ದಡಗಿಸಬೇಕು, ಕೈಗಾರಿಕಾ ಶಾಂತಿ ನೆಲಸಬೇಕು, ಉತ್ಪಾದನೆ ಹೆಚ್ಚಿಸಬೇಕು, ಬಡತನ ತೊಲಗಿಸಬೇಕು, ಇತ್ಯಾದಿ ಆಶಯಗಳನ್ನು ಆಳುವ ಪಕ್ಷವಾದ ಇಂದಿರಾ ಕಾಂಗ್ರೆಸ್ ಮತ್ತು ಗುತ್ತೇದಾರಿ ಬಂಡವಾಳಶಾಹಿಗಳಿಂದ ನಿಯಂತ್ರಿತವಾದ ಹೆಚ್ಚಿನ ಪತ್ರಿಕೆಗಳು ಮೇಲಿಂದ ಮೇಲೆ ಹೇಳುತ್ತಿವೆ. ಆದರೆ, ಇದುವರೆಗೆ ಭದ್ರ ಸರಕಾರದ ಅಥವಾ ಅಭದ್ರ ಸರಕಾರದ ಪ್ರಯೋಜನ ಪಡೆದವರು ಯಾರು, ರಾಷ್ಟ್ರೀಯ ಸಂಪತ್ತು ಯಾರ ಕೈಗೆ ಸೇರುತ್ತಿದೆ, ಜನರು ಏಕೆ ನಿರ್ಗತಿಕರಾಗುತ್ತಿದ್ದಾರೆ ಎಂದು ನಾವೀಗ ತಿಳಿದುಕೊಳ್ಳಬೇಕಾಗಿದೆ.

ಈ ಸಂದರ್ಭದಲ್ಲಿ ಎರಡು ದಶಕಗಳ ಅವಧಿಯಲ್ಲಿ ರಾಷ್ಟ್ರೀಯ ಆದಾಯ ಮತ್ತು ವೈಯಕ್ತಿಕ ಸರಾಸರಿ ಆದಾಯ ಇವುಗಳ ಅಭಿವೃದ್ಧಿಯನ್ನು ಗಮನಿಸೋಣ.

ಕೋಷ್ಟಕ 1. ರಾಷ್ಟ್ರೀಯ ಆದಾಯ ಮತ್ತು ವೈಯಕ್ತಿಕ ಆದಾಯ (1960-61ರ ದರಗಳಲ್ಲಿ)

ವರ್ಷ	ರಾಷ್ಟ್ರೀಯ ಆದಾಯ ಮಿಲಿಯ ರೂ.	ವೈಯಕ್ತಿಕ ಸರಾಸರಿ ಆದಾಯ ರೂ.	ರಾಷ್ಟ್ರೀಯ ಆದಾಯ ಅಭಿವೃದ್ಧಿಯ ಸೂಚ್ಯಂಕ	ವೈಯಕ್ತಿಕ ಸರಾಸರಿ ಆದಾಯ ಅಭಿವೃದ್ಧಿಯ ಸೂಚ್ಯಂಕ
1960-61	132,940	306.3	100	100
1970-71	190,350	351.8	143.5	115,1
1971-72	192,990	348.4	145.5	114.0
1972-73	191,340	337.4	144.2	110.4
1973-74	197,240	340.1	148.7	111.3
1974-75	200,400	337.7	150.7	110.3

(ಸಾಧಾರ; ಭಾರತ ಸರಕಾರದ ಆರ್ಥಿಕ ಸಮೀಕ್ಷೆ 1970-71, ಭಾರತ:1976 ಎಂಬ ಸರಕಾರಿ ಪ್ರಕಟಿತ ಪುಸ್ತಕ, ಮತ್ತು ಇಕನಾಮಿಕ್ಸ್ ಟೈಮ್ಸ್: 27-11-75)

ಮೇಲಿನ ಕೋಷ್ಟಕದಿಂದ ಏನು ತಿಳಿದು ಬರುವುದು? 1960-61 ರಿಂದ 1970-71ರ ಒಂದು ದಶಕದಲ್ಲಿ ರಾಷ್ಟ್ರೀಯ ಆದಾಯದ ಮೊತ್ತವು ರೂ. 132,940 ಮಿಲಿಯಗಳಿಂದ ರೂ. 190,350 ಮಿಲಿಯಗಳಿಗೇರಿತು. ಅಂದರೆ, ರಾಷ್ಟ್ರೀಯ ಆದಾಯವು ಈ ಅವಧಿಯಲ್ಲಿ ಶೇ. 43.5 ರಷ್ಟು ಹೆಚ್ಚಾಯಿತು. ಆದರೆ, ಇದೇ ಪ್ರಮಾಣದಲ್ಲಿ ವೈಯಕ್ತಿಕ ಸರಾಸರಿ ಆದಾಯವೂ ಹೆಚ್ಚಿದೆಯೇ? ಇಲ್ಲ. ಅದು 1960-61 ರಿಂದ 1970-71ರ ಅವಧಿಯಲ್ಲಿ ರೂ. 306.3 ರಿಂದ ರೂ. 351.8ಕ್ಕೆ ಮಾತ್ರ ಏರಿತು. ಅಂದರೆ, ಶೇ. 15.1 ರಷ್ಟು ಮಾತ್ರ ಹೆಚ್ಚಾಯಿತು. ರಾಷ್ಟ್ರೀಯ ಆದಾಯವು ಒಂದು ದಶಕದಲ್ಲಿ ಶೇ. 43.5 ರಷ್ಟು ಹೆಚ್ಚಿದ್ದರೂ ವೈಯಕ್ತಿಕ ಸರಾಸರಿ ಆದಾಯವು ಶೇ. 15.1 ರಷ್ಟೇ ಹೆಚ್ಚಲು ಕಾರಣವೇನು? ರಾಷ್ಟ್ರೀಯ ಸಂಪತ್ತನ್ನು ಸೃಷ್ಟಿಸುವ ಮತ್ತು ಆದಾಯವನ್ನು ಹೆಚ್ಚಿಸುವ ಕಾರ್ಮಿಕರೂ, ರೈತರೂ, ಜನಸಾಮಾನ್ಯರೂ ತಮ್ಮ ನ್ಯಾಯಯುತ ಪಾಲನ್ನು ಪಡೆಯಲು ಅಸಮರ್ಥರಾಗಿರುವುದೇ ಇದಕ್ಕೆ ಕಾರಣ. ರಾಷ್ಟ್ರದ ಸಂಪತ್ತು ಮತ್ತು ಆದಾಯ ಹೆಚ್ಚಿದಂತೆ, ಉತ್ಪಾದನಾ ಮಾಧ್ಯಮಗಳ ಒಡೆಯರು-ಭೂಮಾಲಕರು, ಬಂಡವಾಳಶಾಹಿಗಳು ತಮ್ಮ ಸಿಂಹಪಾಲನ್ನು ಗಿಟ್ಟಿಸಿಕೊಳ್ಳುತ್ತಾರೆ. ಯಾಕೆ? ಅವರು ಆರ್ಥಿಕವಾಗಿ, ರಾಜಕೀಯವಾಗಿ ಕಾರ್ಮಿಕರಿಗಿಂತ ಬಡ ರೈತರಿಗಿಂತ ಪ್ರಬಲರಾಗಿದ್ದಾರೆ. ಭದ್ರ ಸರಕಾರದ ರಕ್ಷಣೆಯೂ ಅವರಿಗಿದೆ!

1971-72 ರಲ್ಲಿ ಇಂದಿರಾ ಕಾಂಗ್ರೆಸ್ ಅತ್ಯಧಿಕ ಬಹುಮತದಿಂದ ಅಧಿಕಾರಕ್ಕೆ ಬಂದಂದಿನಿಂದ ರಾಷ್ಟ್ರೀಯ ಆದಾಯ ಮತ್ತು ವೈಯಕ್ತಿಕ ಸರಾಸರಿ ಆದಾಯ ಇವುಗಳ ಅಭಿವೃದ್ಧಿಯನ್ನು ಗಮನಿಸಿದರೆ ಏನು ತಿಳಿಯುವುದು? 1970-71 ರಿಂದ 1974-75ರ ಅವಧಿಯಲ್ಲಿ ರಾಷ್ಟ್ರೀಯ ಆದಾಯವು ರೂ. 190,350 ಮಿಲಿಯಗಳಿಂದ ರೂ. 200,400 ಮಿಲಿಯಗಳಿಗೇರಿತು. ಅಂದರೆ, ಅದರ ಅಭಿವೃದ್ಧಿಯ ಸೂಚ್ಯಂಕವು 143.5 ರಿಂದ 150.7ಕ್ಕೇರಿತು. ಅದೇ ಅವಧಿಯಲ್ಲಿ ವೈಯಕ್ತಿಕ ಸರಾಸರಿ ಆದಾಯವು ಹಿಂದಿನ ದಶಕದಲ್ಲಿನಂತೆ ಕಿಂಚಿತ್ತಾದರೂ ಏರುವ ಬದಲು, ರೂ. 351.8 ರಿಂದ ರೂ. 337.7ಕ್ಕಿಳಿಯಿತು! ಅಂದರೆ, ಅದರ ಅಭಿವೃದ್ಧಿಯ ಸೂಚ್ಯಂಕವು 115.1 ರಿಂದ 110.3 ಕ್ಕಿಳಿಯಿತು. ಯಾಕೆ? ಇಂದಿರಾಗಾಂಧಿ 'ಗರೀಬಿ ಹಟಾವೊ' ಘೋಷಣೆಯೊಂದಿಗೆ ಭಾರೀ ಬಹುಮತಗಳಿಸಿ ಅಧಿಕಾರಕ್ಕೆ ಬಂದು ಭದ್ರ ಸರಕಾರ ರಚಿಸಿದ ನಂತರದ 5 ವರ್ಷಗಳಲ್ಲಿ ಭೂಮಾಲಕರು, ಬಂಡವಾಳಶಾಹಿಗಳು, ಮುಂತಾದ ಪಟ್ಟಭದ್ರ ಹಿತಾಸಕ್ತಿಗಳು ಇನ್ನಷ್ಟು ಬಲಗೊಂಡರು, ಕಾರ್ಮಿಕರು, ರೈತರು, ಜನಸಾಮಾನ್ಯರು ಐದು ವರ್ಷಗಳ ಹಿಂದೆ ಇದ್ದ ಜೀವನ ಮಟ್ಟವನ್ನು, ಸರಾಸರಿ ಆದಾಯ ಮಟ್ಟವನ್ನು ಉಳಿಸಿಕೊಳ್ಳಲು ವಿಫಲರಾದರು. ಅಂದರೆ, ಅವರ ಹೋರಾಟಗಳನ್ನು ಇಂದಿರಾ ಗಾಂಧಿಯ ಭದ್ರ ಸರಕಾರವು ಅಷ್ಟರಲ್ಲಿಯೇ ಹತ್ತಿಕ್ಕಲಾರಂಭಿಸಿತ್ತು.

1960ರ ದಶಕದಲ್ಲಿ ರಾಷ್ಟ್ರೀಯ ಆದಾಯವು ನಿರೀಕ್ಷಿಸಿದಷ್ಟು ಹೆಚ್ಚಲಿಲ್ಲ. ಅದು ಹೆಚ್ಚಿದ ದರದಲ್ಲಿ ವೈಯಕ್ತಿಕ ಸರಾಸರಿ ಆದಾಯವು ಹೆಚ್ಚಲಿಲ್ಲ. 1970ರ ದಶಕದಲ್ಲಿ, ಇಂದಿರಾಗಾಂಧಿಯ 'ಗರೀಬಿ ಹಟಾವೊ' ಭದ್ರ ಸರಕಾರದ ಅವಧಿಯಲ್ಲಿ ರಾಷ್ಟ್ರೀಯ ಆದಾಯವು ಹೆಚ್ಚುಕಡಿಮೆ ಸ್ಥಗಿತಗೊಳ್ಳಲಾರಂಭಿಸಿತು. ವೈಯಕ್ತಿಕ ಸರಾಸರಿ ಆದಾಯವು ಕಿಂಚಿತ್ತಾದರೂ ಹೆಚ್ಚುವ ಬದಲು ಇಳಿಮುಖವಾಗತೊಡಗಿತು.

ಇನ್ನು ಜನಸಾಮಾನ್ಯರ ಅವಶ್ಯಕ ವಸ್ತುಗಳ ಸರಾಸರಿ ದೊರೆಯುವಿಕೆಯನ್ನು ಪರಿಶೀಲಿಸೋಣ.

ಕೋಷ್ಟಕ 2. ಅವಶ್ಯಕ ವಸ್ತುಗಳ ಸರಾಸರಿ ದೊರೆಯುವಿಕೆ

ವರ್ಷ	ಒಟ್ಟು ಆಹಾರ ಧಾನ್ಯಗಳು ಗ್ರಾಂ. ದಿನಕ್ಕೆ	ಅಡಿಗೆ ತೈಲಗಳು ಕೆ. ಜಿ. ವರ್ಷಕ್ಕೆ	ಸಕ್ಕರೆ ಕೆ. ಜಿ. ವರ್ಷಕ್ಕೆ	ಹತ್ತಿಬಟ್ಟೆ ಮೀಟರ್ ವರ್ಷಕ್ಕೆ
1960-61	468.7	3.2	4.7	13.8
1970-71	469.1	3.5	7.3	13.6
1971-72	467,3	3.0	6.7	12.4
1972-73	424.5	2.4	6.1	13.2
1973-74	452.8	3.4	6.0	12.0
1974-75	415.3	3.2	5.8	12.9

(ಸಾಧಾರ: ಭಾರತ ಸರಕಾರದ ಆರ್ಥಿಕ ಸಮೀಕ್ಷೆ 1975-56)
ವಿ. ಸೂ. ಆಹಾರಧಾನ್ಯಗಳ ಕುರಿತಾದ ವರ್ಷಗಳನ್ನು 1961, 1962,... 1975 ಎಂದು ಓದಿಕೊಳ್ಳಬೇಕು.

ಮೇಲಿನ ಕೋಷ್ಟಕದಿಂದ ಏನು ತಿಳಿಯುವುದು? ಜನಸಾಮಾನ್ಯರ ಜೀವನಮಟ್ಟವನ್ನು ಅವರಿಗೆ ವರ್ಷಕ್ಕೆ ಸಿಗುವ ಸರಾಸರಿ ಜೀವನಾವಶ್ಯಕ ವಸ್ತುಗಳಿಂದ ತೂಗಿ ನೋಡಿದರೆ, ಅವರ ಸರಾಸರಿ ಆದಾಯದಂತೆಯೇ ಅವರ ಜೀವನಮಟ್ಟವೂ 1960 ದಶಕದಲ್ಲಿ ಸ್ಥಗಿತವಾಗಿತ್ತು ಅಥವಾ ಅಲ್ಪಸ್ವಲ್ಪ ಹೆಚ್ಚಿತ್ತು. ಇಂದಿರಾಗಾಂಧಿಯ ಭದ್ರ ಸರಕಾರದ 1970ರ ದಶಕದಲ್ಲಿ ಅವರಿಗೆ ದೊರೆಯುವ ಜೀವನಾವಶ್ಯಕ ವಸ್ತುಗಳ ಪ್ರಮಾಣವು ಇಳಿಮುಖವಾಗತೊಡಗಿತ್ತು! ಜನರ ದಿನದ ಸರಾಸರಿ ಒಟ್ಟು ಆಹಾರಧಾನ್ಯಗಳ ದೊರೆಯುವಿಕೆ 1960-61 ರಲ್ಲಿ 468.7 ಗ್ರಾಂ. ಇದ್ದದು, ಒಂದು ದಶಕದ ನಂತರ 1970-71 ರಲ್ಲಿ 46.91 ಗ್ರಾಂ.ಗೆ ಸ್ವಲ್ಪ ಏರಿ, ಪುನಃ ಮುಂದೆ 5 ವರ್ಷಗಳ ನಂತರ 1974-75ರಲ್ಲಿ 415.3 ಗ್ರಾಂ ಗಿಳಿಯಿತು. ಅಡಿಗೆ ತೈಲಗಳ ವಾರ್ಷಿಕ ಸರಾಸರಿ ದೊರೆಯುವಿಕೆ ಈ ಅವಧಿಯಲ್ಲಿ 3.2 ಕೆ.ಜಿ. ಯಿಂದ 3.5 ಕೆ. ಜಿ.ಗೆ ಏರಿ, ಪುನಃ 3.2 ಕೆ. ಜಿ, ಗಿಳಿದು ಸ್ಥಗಿತಗೊಂಡಿದೆ. ಸಕ್ಕರೆಯ ವಾರ್ಷಿಕ ಸರಾಸರಿ ದೊರೆಯುವಿಕೆ 4.7 ಕೆ. ಜಿ. ಯಿಂದ 7.3 ಕೆ.ಜಿ. ಗೆ ಏರಿ, 5.8 ಕೆ. ಜಿ. ಗೆ ಇಳಿದಿದೆ. ಹತ್ತಿಬಟ್ಟೆಯ ವಾರ್ಷಿಕ ಸರಾಸರಿ ದೊರೆಯುವಿಕೆ 1955-56 ರಲ್ಲಿ 14.4 ಮೀಟರ್ ಇದ್ದದು, 1960-61ರಲ್ಲಿ 13.8ಮೀ. ಗಿಳಿದು, 1970-71, 1974-75, ಮತ್ತು 1977-78 ರಲ್ಲಿ ಅನುಕ್ರಮವಾಗಿ 13.6, 12,9 ಮತ್ತು 11,8 ಮೀಟರಿಗಿಳಿದಿದೆ.

ಇನ್ನೂ ಸ್ಪಷ್ಟ ಹೇಳುವುದಾದರೆ, 1974-75ರಷ್ಟರಲ್ಲಿ ಜನರಿಗೆ ದಿನಕ್ಕೆ ಸರಾಸರಿ ಅರ್ಧ ಕೆ. ಜಿ. ಆಹಾರಧಾನ್ಯಗಳು ಸಿಗುತ್ತಿರಲಿಲ್ಲ, ದಿನಕ್ಕೆ ಸರಾಸರಿ ಒಂದು ಗ್ರಾಂ ಅಡಿಗೆ ತೈಲ ಸಿಗುತ್ತಿರಲಿಲ್ಲ. ದಿನಕ್ಕೆ ಸರಾಸರಿ 2 ಗ್ರಾಂ ಸಕ್ಕರೆ ಸಿಗುತ್ತಿರಲಿಲ್ಲ ಮತ್ತು ವರ್ಷಕ್ಕೆ ಸರಾಸರಿ 12 ಮೀಟರ್ ಬಟ್ಟೆ ಸಿಗುತ್ತಿರಲಿಲ್ಲ! ಇಲ್ಲಿ ನಾವು ಒಂದು ವಿಷಯ ನೆನಪಿನಲ್ಲಿಡಬೇಕು. ಇವೆಲ್ಲಾ ಸರಾಸರಿ ಅಂದಾಜುಗಳು, ಸರಾಸರಿ ಆದಾಯ, ಸರಾಸರಿ ಜೀವನಾವಶ್ಯಕ ವಸ್ತುಗಳು ಸಿಗುವುದು ಎಂದರೆ, ದೇಶದಲ್ಲಿ ಪ್ರತಿಯೊಬ್ಬನಿಗೂ ಕನಿಷ್ಟ ಅಷ್ಟು ಸಿಗುವುದೆಂದು ತಿಳಿಯಬಾರದು. ಈ ಸರಾಸರಿಯಲ್ಲಿ ಬಡ ಬೋರೇಗೌಡ, ಚೋಮ, ದೂಮರೂ ಸೇರಿದ್ದಾರೆ. ಟಾಟಾ, ಬಿರ್ಲಾ ಮುಂತಾದ ಘನ ಶ್ರೀಮಂತರೂ ಸೇರಿದ್ದಾರೆ.

ದೇಶದ ಜನರ ಸರಾಸರಿ ಆದಾಯ ಮತ್ತು ಅವರಿಗೆ ಸಿಗುವ ಸರಾಸರಿ ಅವಶ್ಯಕ ವಸ್ತುಗಳು ಕಡಿಮೆಯಾಗುತ್ತಿವೆ ಎಂದರೆ, ಶ್ರೀಮಂತರಿಗೆ ಸಿಗುವುದು ವಾಸ್ತವವಾಗಿ ಹೆಚ್ಚುತ್ತಿದೆ ಎಂದೂ, ಬಡವರಿಗೆ ಸಿಗುವುದು ಕಡಿಮೆ ಆಗುತ್ತಿದೆ ಎಂದೂ, ಕಡುಬಡವರಿಗೆ ಪಟ್ಟದರಿದ್ರರಿಗೆ ಏನೂ ಸಿಗುತ್ತಿಲ್ಲ ಎಂದೂ ತಿಳಿಯಬೇಕು. ಹಾಗೆಯೇ, ದಿನದ ಸರಾಸರಿ ಆದಾಯ, ಅವಶ್ಯಕ ವಸ್ತುಗಳು ಎಂದರೆ ಪ್ರತಿದಿನವೂ ಪ್ರತಿಯೊಬ್ಬನಿಗೂ ಕನಿಷ್ಟ ಅಷ್ಟು ಸಿಗುವುದೆಂದು ತಿಳಿಯಬಾರದು. 365 ದಿನಗಳಲ್ಲಿ 180 ದಿನಗಳ ಪೂರ್ತಿ ಉದ್ಯೋಗ ಇಲ್ಲದ ಲಕ್ಷಾಂತರ ಕೃಷಿ ಕಾರ್ಮಿಕರಿಗೂ, ಬಡರೈತರಿಗೂ, ನಗರಗಳಲ್ಲಿರುವ ಬಡ ನಿರುದ್ಯೋಗಿಗಳಿಗೂ ಅರೆ ಉದ್ಯೋಗಿಗಳಿಗೂ ಮೇಲೆ ಕಾಣಿಸಿದ ಸರಾಸರಿ ಆದಾಯವಾಗಲೀ ಅವಶ್ಯವಸ್ತುಗಳಾಗಲೀ ಸಿಗುವುದಿಲ್ಲ ಎಂಬ ವಾಸ್ತವ ಸತ್ಯವನ್ನು ನೆನಸಿದಾಗ, ಇಂದಿರಾಗಾಂಧಿಯ ಭದ್ರ ಸರಕಾರದ ಪರಿಣಾಮ ಬಡವರ ಮೇಲೆ ಹೇಗಾಗಿದೆ ಎಂದು ಸ್ಪಷ್ಟವಾಗುವುದು.

ರಾಷ್ಟ್ರೀಯ ಆದಾಯದಲ್ಲಿ ಸಂಘಟಿತ ಕಾರ್ಮಿಕರು ತಮ್ಮ ಶಕ್ತಿ ಪ್ರಯೋಗದಿಂದ ಸಿಂಹಪಾಲು ಪಡೆಯುವರು ಎಂದು ಅಪಾದಿಸಲಾಗುತ್ತಿದೆ. ಅವರನ್ನು ಹದ್ದುಬಸ್ತಿನಲ್ಲಿಡಬೇಕು, ಮುಷ್ಕರ ಹೋರಾಟಗಳನ್ನು ನಿಲ್ಲಿಸಬೇಕು, ಅವರ ವೇತನ ಮಟ್ಟವನ್ನು ಸ್ಥಗಿತಗೊಳಿಸಬೇಕು, ಸಾಧ್ಯವಿದ್ದರೆ ಅದನ್ನು ಇಳಿಸಬೇಕು ಎಂದು ವಾದಿಸಲಾಗುತ್ತಿದೆ. ಹೀಗೆ ಮಾಡುವುದರಿಂದ ಬಡತನ ನಿವಾರಿಸಲು ಸಂಪನ್ಮೂಲಗಳನ್ನು ಪಡೆಯಬಹುದೆಂದು ಭ್ರಮೆ ಹುಟ್ಟಿಸಲಾಗುತ್ತಿದೆ. ಆದರೆ, ಭೂಮಾಲಕರ ಮತ್ತು ಬಂಡವಾಳಶಾಹಿಗಳ ಪರವಾದ ಸರಕಾರದ ಧೋರಣೆಯಿಂದಾಗಿ ಅಸಂಘಟಿತ ಕಾರ್ಮಿಕರು ಮಾತ್ರ ದರಿದ್ರಾವಸ್ಥೆಗಿಳಿಯುತ್ತಿರುವುದಲ್ಲ. ಸಂಘಟಿತ ಕಾರ್ಮಿಕರ ಜೀವನ ಮಟ್ಟವೂ ಕುಸಿಯುತ್ತಿದೆ. ಉತ್ಪಾದನೆಯಲ್ಲಿ ಗಳಿಸಿದ ಅಧಿಕ ಮೌಲ್ಯದಲ್ಲಿ ವೇತನ ರೂಪದಲ್ಲಿ ಅವರ ಪಾಲು ಕಡಿಮೆಯಾಗುತ್ತಿದೆ. ಬಡ್ಡಿ, ಬಾಡಿಗೆ, ಲಾಭಗಳ ರೂಪದಲ್ಲಿ ಬಂಡವಾಳಶಾಹಿಗಳ ಪಾಲು ಹೆಚ್ಚುತ್ತಿದೆ. ಈ ಕೆಳಗಿನ ಕೋಷ್ಟಕದಿಂದ ಇದು ಸ್ಪಷ್ಟವಾಗುವುದು.

ಕೋಷ್ಟಕ 3. ಅಧಿಕ ಮೌಲ್ಯದಲ್ಲಿ ಸಂಘಟಿತ ಕ್ಷೇತ್ರದಲ್ಲಿ ನೌಕರರ ಮತ್ತು ಮಾಲಕರ ಪಾಲುಗಳು (ಶೇಕಡಾ)

ವರ್ಷ	ನೌಕರರ ಪಾಲು	ಬಂಡವಾಳಶಾಹಿಗಳ ಪಾಲು				ಒಟ್ಟು
		ಬಡ್ಡಿ	ಬಾಡಿಗೆ	ಲಾಭ	ಒಟ್ಟು	
1970-71	71.2	10.3	1.6	16.9	29.8	100
1974-75	69.3	10.3	1.5	19.2	31.7	100
1975-76	70.3	9.8	1.6	18.3	29.7	100
1976-77	66.4	10.6	1.7	21.3	33.6	100

(ಸಾಧಾರ: ರಿಸರ್ವ್ ಬ್ಯಾಂಕ್ ವರದಿ: ಜುಲೈ 1979)

(7ನೇ ಪುಟ ನೋಡಿ)

ಇದು ನೀತಿಗಳಿಗಾಗಿ ನಡೆಯುವ ಹೋರಾಟ

ಇ. ಎಂ. ಎಸ್. ನಂಬೂದಿರಿಪಾಡ್

ಪ. ಬಂಗಾಳ, ತ್ರಿಪುರಾ ಮತ್ತು ಕೇರಳಗಳ ಮೂರು ಸರ್ಕಾರಗಳೂ ಒಟ್ಟಾಗಿ ಸೇರಿ ಒಂದು ಪರ್ಯಾಯ ಯೋಜನೆಯನ್ನು ರೂಪಿಸಿಕೊಳ್ಳಬಹುದೆಂದು ಕೇರಳದ ಮುಖ್ಯಮಂತ್ರಿ ಹೇಳಿರುವುದನ್ನು "ರಾಷ್ಟ್ರೀಯ" ಇಂಗ್ಲೀಷ್ ಪತ್ರಿಕೆಗಳಲ್ಲೊಂದಾದ ಟೈಮ್ಸ್ ಆಫ್ ಇಂಡಿಯಾ "ತಪ್ಪು ನಡೆ" ಎಂದು ಬಣ್ಣಿಸಿದೆ. ಇನ್ನೊಂದು "ರಾಷ್ಟ್ರೀಯ" ದಿನಪತ್ರಿಕೆಯಾದ ನ್ಯಾಷನಲ್ ಹೆರಾಲ್ಡ್, ಈ ಹೇಳಿಕೆಯನ್ನು "ಕೇಂದ್ರದೊಡನೆ ಸಂಘರ್ಷ"ವಲ್ಲದೆ ಬೇರೆಯಲ್ಲ ಎಂದು ಟೀಕಿಸಿದೆ. ಅಲ್ಲದೆ ಕೇಂದ್ರದೊಡನೆ ಸಂಘರ್ಷಿಸುವುದು ತಮ್ಮ ಉದ್ದೇಶವಲ್ಲ ಎಂದು ಕೇರಳದ ಮುಖ್ಯಮಂತ್ರಿ ಪದೇ ಪದೇ ಹೇಳಿದ್ದಾರೆ ಎಂದೂ ಬರೆದಿದೆ,

ಅವರ ವಾದಗಳು :

ಈ ನಡೆ "ತಪ್ಪುಗ್ರಹಿಕೆ"ಯಿಂದ ಕೂಡಿದ್ದು ಏಕೆ? "ಈಗಾಗಲೇ ರೂಢಿಯಲ್ಲಿರುವ ಪದ್ಧತಿಗಳು ಮತ್ತು ಕ್ರಮಗಳನ್ನು ಇದು ಅಲ್ಲಗಳೆಯುವುದಲ್ಲದೆ, ಈ ಮೂರು ರಾಜ್ಯಗಳು ಮತ್ತು ಕೇಂದ್ರದ ನಡುವೆ, ಇತರ ರಾಜ್ಯಗಳ ನಡುವೆ ಅನವಶ್ಯಕ ಗುಮಾನಿಗಳನ್ನು ಸೃಷ್ಟಿಸುತ್ತದೆ" ಎಂದೂ ಟೈಮ್ಸ್ ಆಫ್ ಇಂಡಿಯಾ ಉತ್ತರಿಸುತ್ತದೆ. ಅಷ್ಟಲ್ಲದೆ,

"ಸಾಧಾರಣ ಪರಿಸ್ಥಿತಿಯಲ್ಲಿ ಸಂಪನ್ಮೂಲಗಳ ಬಳಕೆ ಮತ್ತು ಸ್ಪರ್ಧಾತ್ಮಕ ಬೇಡಿಕೆಗಳ ಈಡೇರಿಕೆಗೆ ನಿಧಿ ಹಂಚಿಕೆ ಮುಂತಾದುವನ್ನು ರಾಷ್ಟ್ರೀಯ ಅಭಿವೃದ್ಧಿ ಸಮಿತಿಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುತ್ತದೆ. ಆದರೆ ಸದ್ಯದಲ್ಲಿ ಆ ಸಮಿತಿ ಕಾರ್ಯ ನಡೆಸುತ್ತಿಲ್ಲ. ಒಂಬತ್ತು ರಾಜ್ಯಗಳಿಗೆ ವಿಧಾನಸಭೆ ಚುನಾವಣೆ ಇನ್ನೂ ನಡೆಯಲಿರುವುದರಿಂದ ಈ ಸಮಿತಿಯನ್ನು ಈಗಲೇ ರಚಿಸಬೇಕೆಂದು ಮಾರ್ಕ್ಸ್‌ವಾದಿ ಪಕ್ಷವೂ ಕೇಳುವಂತಿಲ್ಲ. ನಡುವೆ, ಆ ಪಕ್ಷಕ್ಕಿರುವ ಒಂದೇ ದಾರಿಯೆಂದರೆ ಕೇಂದ್ರದ ಜೊತೆ ತನ್ನ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುವುದಲ್ಲದೆ, ತಾವು ಪ್ರತಿಯೊಂದು ವಿಚಾರಕ್ಕೂ ನವದೆಹಲಿಯೊಡನೆ ಘರ್ಷಣೆಗೆ ಇಳಿಯುತ್ತೇವೆಂದು ಹೇಳುವುದಲ್ಲ".

ಕೇರಳ ಮುಖ್ಯಮಂತ್ರಿಯವರು ಮಾಡಿರುವ ಸಲಹೆ ಪೂರ್ವಾಪರಗಳನ್ನು ಚರ್ಚಿಸುವ ಅಗತ್ಯವಿದೆ ಎಂದೂ ನ್ಯಾಷನಲ್ ಹೆರಾಲ್ಡ್‌ಗೆ ಅನ್ನಿಸುವುದಿಲ್ಲ. "ಕೇಂದ್ರವು ನೀಡಿರುವ ಚೌಕಟ್ಟಿಗೆ ಹೊಂದದ ಅಭಿವೃದ್ಧಿ ಯೋಜನೆಗಳನ್ನು ರಾಜ್ಯಗಳು ಹೇಗೆ ರೂಪಿಸುತ್ತವೆ?" ಎಂದು ಅದು ಇಡೀ ಪ್ರಶ್ನೆಯನ್ನು ಸಂಪಾದಕೀಯದಲ್ಲಿ ತಳ್ಳಿ ಹಾಕುತ್ತಾ, "ಘರ್ಷಣೆ ಬೇಕೆನ್ನುವ ಆಲೋಚನೆಯನ್ನು ಇದು ಹೇಳುತ್ತದೆ" ಎಂದು ಕೊನೆಗೊಳಿಸುತ್ತದೆ,

ಕೆಳಹಂತದಿಂದ ಯೋಜನೆ :

ಯೋಜನಾ ತಜ್ಞರಲ್ಲಿ "ಕೆಳಹಂತದಿಂದ ಯೋಜನೆ" ಎಂಬ ಮಾತು ತುಂಬ ಬಳಕೆಯಲ್ಲಿದೆ ಎಂಬುದನ್ನು ಈ ಮಾನ್ಯ ಸಂಪಾದಕರಿಗೆ ನೆನಪಿಸೋಣ. ಯೋಜನೆಯ ಜಾರಿಯಲ್ಲಿ ಮಾತ್ರವಲ್ಲದೆ ದೇಶದ ಅಭಿವೃದ್ಧಿ ಯೋಜನೆಯನ್ನು ರೂಪಿಸುವುದರಲ್ಲಿ ಕೂಡ ಪಂಚಾಯಿತಿ ಸಂಸ್ಥೆಗಳನ್ನು ಒಳಗೊಳ್ಳಬೇಕು ಎಂದು ಒತ್ತಾಯಿಸುವುದರ ಬಗ್ಗೆ ಯೋಜನಾಭವನ ಮತ್ತು ಅಂಥ ಇತರ ಸಂಸ್ಥೆಗಳಿಂದ ಅನೇಕಾನೇಕ ಗ್ರಂಥಗಳು ಹೊರಬಂದಿವೆ. ಇಡೀ ಯೋಜನಾ ಪ್ರಕ್ರಿಯೆಯೊಳಗೆ ಜನತೆಯನ್ನು ಒಳಗೊಳ್ಳುವ ವಿಧಾನಗಳು ಮತ್ತು ಕ್ರಮಗಳ ಬಗ್ಗೆ ಬುದ್ಧಿಜೀವಿಗಳು, ಅಧಿಕಾರಿಗಳು ಮತ್ತು ರಾಜಕೀಯ ನಾಯಕರು ತಮ್ಮ ಮಿದುಳುಗಳನ್ನೆಲ್ಲ ತಡಕಾಡಿದ್ದಾರೆ,

"ಕೆಳಹಂತದಿಂದ ಯೋಜನೆ"ಮತ್ತು "ಜನತೆ ಭಾಗವಹಿಸುವಿಕೆ" ಮುಂತಾದ ಮಾತುಗಳೆಲ್ಲ ಗಂಭೀರವಾಗಿ ಆಡಿದ್ದಲ್ಲ, ಆ ಪರದೆಯ ಹಿಂದೆ ಆಡಳಿತ ಪಕ್ಷಗಳು, ನವದೆಹಲಿಯಲ್ಲೇ ಎಲ್ಲ ಅಧಿಕಾರಗಳನ್ನು ಕೇಂದ್ರೀಕರಿಸುವ ತಮ್ಮ ನಿಜವಾದ ಆಸೆಯನ್ನು ಸಾರ್ವಜನಿಕರ ದೃಷ್ಟಿಯಿಂದ ಮುಚ್ಚಿಟ್ಟಿದ್ದರು ಎಂಬುದನ್ನು ಈ ಬುದ್ಧಿವಂತ ಸಂಪಾದಕರು ಅಂದುಕೊಂಡಿದ್ದಾರೆಯೆ? ಇಲ್ಲದಿದ್ದರೆ ರಾಜ್ಯಗಳ ಅಭಿವೃದ್ಧಿ ಯೋಜನೆಗಳು "ಕೇಂದ್ರವು ಒದಗಿಸುವ ವಿಶಾಲ ಚೌಕಟ್ಟಿನೊಳಗೇ" ಇರಬೇಕೆಂದು ಅವರು ಹೇಗೆ ಹೇಳುತ್ತಾರೆ?

ಈ ಯೋಜನಾ ಪ್ರಕ್ರಿಯೆಯು ಆರಂಭವಾದ ಸಮಯದಲ್ಲಿಯೇ ಇದರ ಶಿಲ್ಪಿಯಾದ ಜವಹರಲಾಲ್ ನೆಹರು ಅವರು "ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ"ದ ಕಲ್ಪನೆಯನ್ನೂ ಹುಟ್ಟು ಹಾಕಿದರೆಂಬುದನ್ನು ಈ ನಮ್ಮ ಸನ್ಮಾನ್ಯ ಸಂಪಾದಕರ ನೆನಪಿಗೆ ತರಬೇಕು. ಈ ಮಾತಿನಿಂದಲೇ "ಪಂಚಾಯತ್ ರಾಜ್"ಎಂಬ ಪದವೂ ಹುಟ್ಟಿಕೊಂಡಿದ್ದು, ಯೋಜನಾ ಪ್ರಕ್ರಿಯೆಯನ್ನು ಪ್ರಜಾಪ್ರಭುತ್ವವಾದಿ ರೀತಿಯಲ್ಲಿ ಜಾರಿಗೆತಂದರೆ, ಅಧಿಕಾರ ಮತ್ತು ಸಂಪನ್ಮೂಲಗಳನ್ನು ಕೇಂದ್ರದಿಂದ ರಾಜ್ಯಗಳಿಗೆ, ರಾಜ್ಯಗಳಿಂದ ಜಿಲ್ಲೆಗಳಿಗೆ ಮತ್ತೂ ಕೆಳದಿನ ಹಳ್ಳಿಗಳಿಗೆ ವಿಕೇಂದ್ರೀಕರಿಸಿದಾಗ ಮಾತ್ರ ಅರ್ಥಪೂರ್ಣವಾಗುತ್ತದೆ ಎಂಬುದೇ ಈ ಮಾತಿನ ಅರ್ಥ, ಪ್ರಜಾಪ್ರಭುತ್ವ ಮತ್ತು ವಿಕೇಂದ್ರೀಕರಣದ ಇಂಥ ಆಡಳಿತ ಚೌಕಟ್ಟು ಇರದಿದ್ದರೆ "ಕೆಳಹಂತದಿಂದ ಯೋಜನೆ ಎಂಬ ಮಾತಿಗೆ ಅರ್ಥವೇ ಇರುವುದಿಲ್ಲ.

ಕೇಂದ್ರದ ಅತಿಕ್ರಮಣ :

"ಕೆಳಹಂತದಿಂದ ಯೋಜನೆ" "ಜನತೆ ಭಾಗವಹಿಸುವಿಕೆ" "ಪ್ರಜಾಪ್ರಭುತ್ವವಾದಿ ವಿಕೇಂದ್ರೀಕರಣ" ಮುಂತಾದ ಮಾತುಗಳಲ್ಲಿ ಅಡಗಿರುವ ಸರಿಯಾದ ಆಲೋಚನೆಗಳಿಗೂ ನೆಹರು ಅವರ ಸ್ವಂತ ಆಚರಣೆಗಳಿಗೂ ಘರ್ಷಣೆ ಬಂದಿತೆನ್ನುವುದು ಬೇರೆ ವಿಚಾರ. ರಾಜ್ಯಗಳ ಅಧಿಕಾರಗಳು ಮತ್ತು ಸಂಪನ್ಮೂಲಗಳ ಮೇಲೆ ಹೆಚ್ಚು ಹೆಚ್ಚಿನ ದಾಳಿಯು ನೆಹರು ಅವರ ಕಾಲದಲ್ಲೇ ಆರಂಭವಾಯಿತೆನ್ನುವುದು ನಮಗೆಲ್ಲ ತಿಳಿದಿದೆ. ಸಂವಿಧಾನದ ಪ್ರಕಾರ ರಾಜ್ಯಗಳಿಗೆ ಕೆಲವು ವಿಚಾರಗಳ ಬಗ್ಗೆ ದತ್ತವಾಗಿದ್ದ ಅಧಿಕಾರವನ್ನು ಕೇಂದ್ರವು ಕಸಿದುಕೊಳ್ಳುವುದು ಆಗ ಶುರುವಾಯಿತು. ರಾಜ್ಯ ಸರ್ಕಾರಗಳ ಮೇಲೆ ನೆಹರು ಅವರ ಪಕ್ಷವು ಹೊಂದಿದ್ದ ರಾಜಕೀಯ ನಿಯಂತ್ರಣದ ಮೂಲಕ ಇದು ಸಾಧ್ಯವಾಯಿತು.

1957-59ರಲ್ಲಿ ಕೇರಳದಲ್ಲಿದ್ದ ಕಮ್ಯುನಿಸ್ಟ್ ಸರ್ಕಾರವು ಅವರ ನಿಯಂತ್ರಣದಲ್ಲಿಲ್ಲದ್ದರಿಂದ ವಿನಾಕಾರಣ ವಿಸರ್ಜನೆ ಮಾಡುವುದರ ಮೂಲಕ ನೆಹರು ಅವರ ಕಾಲದಲ್ಲಿ ಉದ್ದೇಶ ಸಾಧಿಸಲಾಯಿತು. ದೇಶದ ಮೇಲೆ ಒಂದು ಪಕ್ಷದ ಸರ್ವಾಧಿಕಾರ ಮತ್ತು ಆಡಳಿತ ಪಕ್ಷದ ಮೇಲೆ ಒಬ್ಬವ್ಯಕ್ತಿ ಅಥವಾ ಗುಂಪಿನ ಅಧಿಕಾರದ ದಾರಿಯಲ್ಲಿ ಹೊರಟ ನೆಹರು ಅವರ ಮಗಳಿಂದ ಇದು ಇನ್ನೂ ಹೆಚ್ಚು ದೃಢವಾಯಿತು. ನೀತಿಯ ಬಗ್ಗೆ ಮಾಡಿದ ಇತರ ಘೋಷಣೆಗಳಂತೆಯೇ "ಕೆಳಹಂತದಿಂದ ಯೋಜನೆ" ಎಂಬ ನೆಹರು ಅವರ ಘೋಷಣೆಯೂ ವ್ಯತಿರಿಕ್ತ ಆಚರಣೆಗಳಿಗೆ ಗುರಿಯಾಯಿತು.

ತಿರಸ್ಕೃತವಾದದ್ದು :

ನೆಹರು ಅವರ ನೇತೃತ್ವದಲ್ಲಿ ರಚಿತವಾದ ಯೋಜನಾ ಆಯೋಗವೂ ಕೂಡ "ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ" ಎಂಬ ಪೊಳ್ಳು ಘೋಷಣೆಯ ಹಿಂದೆ ಕೇಂದ್ರೀಕರಣವನ್ನೇ ಬೆಂಬಲಿಸುವ ಸಂಸ್ಥೆಯಾದಿತ್ತು. ಏಕೆಂದರೆ ಪಂಚವಾರ್ಷಿಕ ಯೋಜನೆಗಳಿಗೆ ರೂಪಿಸಿದ ವ್ಯವಸ್ಥೆಯೇ, ರಾಜ್ಯಸರ್ಕಾರಗಳಿಗೆ ಹೆಚ್ಚು ಅಭಿವೃದ್ಧಿ ಚಟುವಟಿಕೆಗಳನ್ನು ನೀಡುವ ಸಂವಿಧಾನಕ್ಕೆ ವಿರೋಧವಾಗಿತ್ತು, ರಾಷ್ಟ್ರೀಯ ಅಭಿವೃದ್ಧಿಯ ಕ್ಷೇತ್ರಗಳಾದ ಕೃಷಿ, ಅರಣ್ಯ, ಮೀನುಗಾರಿಕೆ, ಕೈಗಾರಿಕೆ, ಶಿಕ್ಷಣ ಮುಂತಾದುವೆಲ್ಲ ರಾಜ್ಯಗಳ ಅಧಿಕಾರದ ವಲಯಕ್ಕೆ ಸೇರಿದುವೆಂದು ಸಂವಿಧಾನ ಸ್ಪಷ್ಟವಾಗಿ ಹೇಳಿತ್ತು. ಆದರೆ ಯೋಜನಾ ಆಯೋಗದ ನೇಮಕ ಮತ್ತು ಪಂಚವಾರ್ಷಿಕ ಯೋಜನೆಗಳು ಒಂದಾದ ಮೇಲೊಂದರಂತೆ ರೂಪುಗೊಂಡ ರೀತಿ ಇವೆಲ್ಲವೂ ಈ ಕ್ಷೇತ್ರಗಳ ಮೇಲೆ ರಾಜ್ಯಗಳಿಗೆ ಇದ್ದ ಅಧಿಕಾರವನ್ನೂ ಕಸಿದುಕೊಂಡವು. ರಾಜ್ಯಗಳು ಒಂದು ಸಂಯುಕ್ತ ಕೇಂದ್ರದ ಸ್ವಾಯತ್ತ ಅಂಗಗಳಾಗಿರುವುದರ ಬದಲು ಒಂದು ಐಕ್ಯ ಕೇಂದ್ರದ ನಿಸ್ಸಹಾಯ ಅಂಗಗಳಾದವು.

ರಾಜ್ಯ ಸರ್ಕಾರಗಳ ಚಟುವಟಿಕೆಗಳ ಸಮನ್ವಯದ ಅಗತ್ಯ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಒಂದು ಅಖಿಲ ಭಾರತ ದೃಷ್ಟಿಕೋನವನ್ನು ರೂಪಿಸುವ ಅಗತ್ಯಗಳನ್ನು ಇಲ್ಲಿ ತಿರಸ್ಕರಿಸುತ್ತಿಲ್ಲ. ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಸಂಪಾದಕರು ಬರೆದಂತೆ "ಕೇಂದ್ರವು ಒದಗಿಸಿದ ವಿಶಾಲ ಚೌಕಟ್ಟಿನೊಳಗೆ ಅಭಿವೃದ್ಧಿ ಯೋಜನೆಗಳನ್ನು ರೂಪಿಸು"ವುದನ್ನು ಮಾತ್ರ ಇಲ್ಲಿ ತಿರಸ್ಕರಿಸಲಾಗುತ್ತದೆ.

ರಾಜ್ಯಗಳು ತಮ್ಮ ಸ್ವಂತ ಅಗತ್ಯಗಳಿಗೆ ತಕ್ಕಂತೆ ರೂಪಿಸಿಕೊಳ್ಳುವ ಅಭಿವೃದ್ಧಿ ಚಟುವಟಿಕೆಗಳನ್ನು ಸಮನ್ವಯಗೊಳಿಸುವ ಒಂದು ನೈಜ ಸಂಯುಕ್ತ ಕೇಂದ್ರವಾಗಿ ಕೇಂದ್ರ ಸರ್ಕಾರ ಕೆಲಸಮಾಡಬೇಕು."ಕೇಂದ್ರದ ಯೋಜನೆಯ ಚೌಕಟ್ಟಿನೊಳಗೆ" ತಮ್ಮ ಯೋಜನೆಗಳನ್ನು ರೂಪಿಸಿಕೊಂಡು, ರಾಜ್ಯಗಳು ಕೇಂದ್ರದ ಕೈಕೆಳಗಿನ ಅಂಗಗಳಾಗಿ ಕೆಲಸ ನಿರ್ವಹಿಸಬೇಕು ಎಂಬ ಟೈಮ್ಸ್ ಆಫ್ ಇಂಡಿಯಾ ಮತ್ತು ನ್ಯಾಷನಲ್ ಹೆರಾಲ್ಡ್‌ಗಳ ಆಲೋಚನೆಗೆ ಇದು ವ್ಯತಿರಿಕ್ತವಾದದ್ದು.

ಸರ್ವಾಧಿಕಾರವನ್ನು ವಿರೋಧಿಸಿ ಪ್ರಜಾಪ್ರಭುತ್ವವನ್ನು ರಕ್ಷಿಸುವ ಮತ್ತು ಕೇಂದ್ರೀಕೃತ ಆಡಳಿತವನ್ನು ವಿರೋಧಿಸಿ ರಾಜ್ಯಗಳ ಸ್ವಾಯತ್ತತೆಯನ್ನು ಎತ್ತಿಹಿಡಿಯುವ ಯಾರನ್ನೇ ಆಗಲಿ "ದೇಶವಿರೋಧಿ" ಎಂದು ಕಾಂಗ್ರೆಸ್ (ಐ)ನ ಎರಡು ಬಾಲಬಡುಕಗಳು ಕರೆಯುವುದು ಅರ್ಥವಾಗುತ್ತದೆ. ಅವರಿಗೆ, ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ (ಐ) ಗಳಿಸಿರುವ "ಅಗಾಧ ವಿಜಯ"ವೇ ಅತಿ ಶ್ರೇಷ್ಠವಾದದ್ದೇ ಹೊರತು, ಪ. ಬಂಗಾಳ, ತ್ರಿಪುರ, ಕೇರಳಗಳಲ್ಲಿ ವಾಮ ಅಥವಾ ವಾಮ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಗಳಿಸಿರುವ ಅಷ್ಟೇನು "ಅಗಾಧ"ವಲ್ಲದ ಗೆಲುವು ಏನೇನೂ ಅಲ್ಲ. ಈಗ ಒಂಬತ್ತು ಜನತಾ ಮತ್ತು ಲೋಕದಳ ನೇತೃತ್ವದ ರಾಜ್ಯ ಸರ್ಕಾರಗಳನ್ನು (ಈಗ ಜನತಾ ಇದ್ದ ದೆಹಲಿ ಮೆಟ್ರೊಪಾಲಿಟನ್ ಕೌನ್ಸಿಲ್ ಕೂಡ) ವಿಸರ್ಜಿಸಿ, ಜಗಮೋಹನ್ ಮತ್ತು ಭಿಂದರ್ ಮುಂತಾದ ಸರ್ವಾಧಿಕಾರಿ ಸಾಧನಗಳನ್ನು ಪುನಃ ಅಧಿಕಾರಕ್ಕೆ ತರಲಾಗಿದೆ. ಶ್ರೇಷ್ಠ ನ್ಯಾಯಾಲಯದ ಒಬ್ಬ ನ್ಯಾಯಾಧೀಶರು ಕೂಡ ಶ್ರೀಮತಿ ಗಾಂಧಿಯ ವಿಜಯವನ್ನು ಸಾರ್ವಜನಿಕವಾಗಿ ಹೊಗಳುವಂಥ "ಬದ್ಧ ನ್ಯಾಯವ್ಯವಸ್ಥೆ"ಯ ಪರಿಸರ ಸೃಷ್ಟಿಸಲಾಗಿದೆ. (ಇದು ಶ್ರೇಷ್ಠ ನ್ಯಾಯಾಲಯಕ್ಕೆ ತೋರಿಸಿದ ತಿರಸ್ಕಾರ ಕೂಡ). ಕಾಂಗ್ರೆಸ್ (ಐ)ನ ನಾಯಕಿಯು ಯಾವ ತಪ್ಪನ್ನೂ ಮಾಡುವುದಿಲ್ಲ ಎಂಬ ತೀರ್ಮಾನಕ್ಕೆ ಬಂದುಬಿಟ್ಟಿರುವುದರಿಂದ ಈ ಎರಡು "ರಾಷ್ಟ್ರೀಯ" ಪತ್ರಿಕೆಗಳ ಸಂಪಾದಕರು ಕಾಂಗ್ರೆಸ್ (ಐ) ಮತ್ತು ಅದರ ಕೇಂದ್ರ ಸರ್ಕಾರದ ರಾಜಕೀಯ ದಾರಿಯಲ್ಲೇ ನಡೆಯಲು ಆ ಮೂರು ರಾಜ್ಯ ಸರ್ಕಾರಗಳು ಹೇಗೆ ನಿರಾಕರಿಸುತ್ತಿವೆ ಎಂಬುದನ್ನು ಅರ್ಥಮಾಡಿಕೊಳ್ಳಲಾರರು, ಆದ್ದರಿಂದಲೇ ಕೇರಳ ಮುಖ್ಯಮಂತ್ರಿಗಳ ಹೇಳಿಕೆಯನ್ನು ಅವರು "ತಪ್ಪುಗ್ರಹಿಕೆಯ ನಡೆ" ಮತ್ತು "ಘರ್ಷಣೆ" ಎಂದೆಲ್ಲ ವರ್ಣಿಸಿದ್ದಾರೆ,

ನಮ್ಮ ಪಕ್ಷದ ನಿಲುವು :

ಈ ಇಬ್ಬರು ಸಂಪಾದಕರೂ ಎತ್ತಿ ಆಡಿರುವ ಕೇರಳ ಮುಖ್ಯಮಂತ್ರಿಗಳ ಹೇಳಿಕೆಯು, ಅವರದೇ ಸ್ವಂತ ಹೇಳಿಕೆಯಲ್ಲ ಎಂಬುದನ್ನು ನಾವು ಸ್ಪಷ್ಟಪಡಿಸೋಣ. ಈ ವಿಷಯದ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಗಂಭೀರವಾಗಿ ಆಲೋಚಿಸಿ ಹೀಗೆ ತೀರ್ಮಾನಿಸಿದೆ: "ಆಳಿತ ವರ್ಗಗಳು ಅನುಸರಿಸುತ್ತಿರುವ ಬಂಡವಾಳಶಾಹಿ ಅಭಿವೃದ್ಧಿ ಮಾರ್ಗವು ಆರ್ಥಿಕತೆಯನ್ನು ಮತ್ತಷ್ಟು ಬಿಕ್ಕಟ್ಟಿನಲ್ಲಿ ಮುಳುಗಿಸುತ್ತದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಇತರ ವಾಮ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ ಜೊತೆಗೂಡಿ ಪದೇ ಪದೇ ಹೇಳುತ್ತಿದೆ. ಸಮಾಜವಾದಿ ಮಾದರಿಯ ಸಮಾಜ, ದೊಡ್ಡದೊಡ್ಡ ಪಂಚವಾರ್ಷಿಕ ಯೋಜನೆಗಳು, ಗರೀಬಿ ಹಟಾವೋ, ಇಪ್ಪತ್ತು ಅಂಶದ ಕಾರ್ಯಕ್ರಮ, ಗಾಂಧಿವಾದಿ ಯೋಜನೆ ಇತ್ಯಾದಿ ಪೊಳ್ಳು ಘೋಷಣೆಗಳೆಲ್ಲವೂ ತಮ್ಮ ಘೋಷಿತ ಉದ್ದೇಶಗಳಲ್ಲಿ ಸೋತು, ಆರ್ಥಿಕತೆಯ ಬಿಕ್ಕಟ್ಟನ್ನು ಹೆಚ್ಚಿಸಿವೆ. ಏಕೆಂದರೆ ಇವೆಲ್ಲವೂ, ಆರ್ಥಿಕತೆಯ ಮೇಲೆ ಭಾರತೀಯ ಆಳುವ ವರ್ಗಗಳು ಮತ್ತು ವಿದೇಶಿ ಗುತ್ತೇದಾರಿಗಳ ಹಿಡಿತವನ್ನು ಹೆಚ್ಚಿಸುವ ತಳಹದಿಯ ಮೇಲೆ ಇರುವಂಥವು. ಈ ಎಲ್ಲ ನೀತಿಗಳನ್ನು ತಲೆಕೆಳಗು ಮಾಡಿದರೆ ಮಾತ್ರ ದೇಶವು ಬಿಕ್ಕಟ್ಟಿನಿಂದ ಪಾರಾಗಬಹುದು."

ಆದ್ದರಿಂದ, ಕೇರಳ ಅಥವಾ ಇನ್ಯಾವುದೇ ರಾಜ್ಯವು ಕೇಂದ್ರದ ಮೇಲೆ ಬೇಡಿಕೆಗಳ ಒತ್ತಾಯ ತರುವ, ಆ ರಾಜ್ಯಕ್ಕೆ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಹೆಚ್ಚು ಧನಸಹಾಯ ನೀಡಲೆಂದು ಒತ್ತಾಯಿಸುವ ಪ್ರಶ್ನೆ ಇಲ್ಲಿಲ್ಲ. ಇದುವರೆಗೆ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿರುವ ಚೌಕಟ್ಟನ್ನೇ ತಲೆಕೆಳಗು ಮಾಡಬೇಕೆಂಬುದು ಇಲ್ಲಿನ ಬೇಡಿಕೆಯಾಗಿದೆ. ಇಡೀ ಎಡ ಮತ್ತು ಪ್ರಜಾಪ್ರಭುತ್ವವಾದಿ ಚಳುವಳಿಯು "ಈ (ಸರ್ಕಾರದ) ವರ್ಗ ನೀತಿಗಳನ್ನು ತಿರುವುಮುರುವು ಮಾಡಬೇಕೆಂದು ಪದೇಪದೇ ಕೇಳುತ್ತಿದೆ" ಎಂಬ ಕರೆಯಲ್ಲಿ ಈ ಬೇಡಿಕೆ ಧ್ವನಿತವಾಗಿದೆ ಎಂದು ಕೇಂದ್ರ ಸಮಿತಿ ಇಲ್ಲಿ ಸೂಚಿಸುತ್ತಿದೆ,

ಆದ್ದರಿಂದ ಕೇಂದ್ರಸಮಿತಿಯು "ವಿಚಾರವಾದಿ ಬುದ್ಧಿಜೀವಿಗಳು, ಕಾರ್ಮಿಕರ ಹೋರಾಡುವ ಸಂಘಟನೆಗಳ ಜೊತೆ, ವಾಮ ಮತ್ತು ಪ್ರಜಾಪ್ರಭುತ್ವವಾದಿ ರಾಜಕೀಯ ಪಕ್ಷಗಳ ಜೊತೆ ಒಂದಾಗಿ, ಯೋಜನಾ ಪ್ರಕ್ರಿಯೆಯನ್ನು ಪುನರ್ರಚಿಸುವ ದಾರಿಗಳನ್ನು ಹುಡುಕಬೇಕೆಂದು" ಮನವಿ ಮಾಡುತ್ತದೆ. "ಈ ದಿಶೆಯಲ್ಲಿ, ಪ. ಬಂಗಾಳ ತ್ರಿಪುರ ಮತ್ತು ಕೇರಳಗಳ ರಾಜ್ಯ ಸರ್ಕಾರಗಳು ಅಂಥ ಯೋಜನಾ ಸಂಸ್ಥೆಗಳನ್ನು ಹೊಂದಿರುವುದರಿಂದ, ಪ್ರಮುಖ ಪಾತ್ರವಹಿಸಬಹುದು" ಎಂದೂ ಹೇಳುತ್ತದೆ.

ಹೊಸದಲ್ಲ :

1956ರ ಹೊತ್ತಿಗೇ ಕಮ್ಯುನಿಸ್ಟ್ ಮತ್ತಿತರ ಶಕ್ತಿಗಳು ರಾಜ್ಯದ ಅಧಿಕಾರವನ್ನು ವಹಿಸಿಕೊಳ್ಳಲು ಸಮರ್ಥವಾದಾಗ ಭಾರತದಲ್ಲಿ ಯೋಜಿತ ಅಭಿವೃದ್ಧಿಯ ಪ್ರಶ್ನೆಯ ಬಗ್ಗೆ ಆಗಿನ ಐಕ್ಯ ಕಮ್ಯುನಿಸ್ಟ್ ಪಕ್ಷವು ಗಂಭೀರವಾಗಿ ಯೋಚಿಸಿತ್ತು. ಆಗ ಎರಡನೇ ಪಂಚವಾರ್ಷಿಕ ಯೋಜನೆಯ ವಿವರಗಳನ್ನು ರೂಪಿಸುವ ಸಮಯವಾಗಿದ್ದರಿಂದ ಯೋಜನೆಯ ಚೌಕಟ್ಟಿನ ಬಗ್ಗೆ ದೇಶದಾದ್ಯಂತ ಚರ್ಚೆ ನಡೆಯುತ್ತಿತ್ತು. ಪಾಲ್‌ಘಾಟ್‌ನಲ್ಲಿ 1956ರಲ್ಲಿ ನಡೆದ ಆಗಿನ ಐಕ್ಯ ಕಮ್ಯುನಿಸ್ಟ್ ಪಕ್ಷದ ನಾಲ್ಕನೇ ಅಧಿವೇಶನವು ಮುಗಿಯುತ್ತಿದ್ದ ಮೊದಲನೇ ಪಂಚವಾರ್ಷಿಕ ಯೋಜನೆಯ ವಿಮರ್ಶೆಯನ್ನೂ, ಎರಡನೇ ಪಂಚವಾರ್ಷಿಕ ಯೋಜನೆಗೆ ಸಲಹೆಗಳನ್ನೂ ಮಾಡಿತ್ತು. ಇತರ ವಿಷಯಗಳ ಜೊತೆಗೆ, ಪಕ್ಷದ ಅಧಿವೇಶನವು ಈ ಗೊತ್ತುವಳಿಯನ್ನೂ ಸ್ವೀಕರಿಸಿತ್ತು.

"ಕೈಗಾರಿಕೀಕರಣದ ಉದ್ದೇಶಗಳು ಮತ್ತು ಈ ಉದ್ದೇಶಗಳನ್ನು ಸಾಧಿಸಲು ಸರ್ಕಾರವು ಅನುಸರಿಸುತ್ತಿರುವ ವಿಧಾನಗಳು ಇವುಗಳ ನಡುವೆ ಇರುವ ಅಂತರ, ದೇಶದ ಅಭಿವೃದ್ಧಿ ಪ್ರಕ್ರಿಯೆಯು ಒಂದು ನಿಧಾನಗತಿ ಮತ್ತು ತಡೆಯನ್ನು ಹೊಂದುವಂತೆ ಮಾಡುತ್ತದೆ. ಇದರಲ್ಲಿ ತಿರುವುಗಳೂ ಇದ್ದು, ತೀವ್ರ ಘರ್ಷಣೆಗಳು ಮತ್ತು ವಿರೋಧಾಭಾಸಗಳೂ ಏಳುತ್ತವೆ. ಭಾರತದ ಅಭಿವೃದ್ಧಿಯ ದಾರಿಯಲ್ಲಿ ನಿಂತಿರುವ ಅಡ್ಡಿಗಳ ನಿವಾರಣೆಗೆ ಇದು ತಡೆಯುಂಟುಮಾಡುತ್ತದೆ. ಜನತೆಯ ಮೇಲೆ ವಿಪರೀತ ಹೊರೆಗಳು ಬಿದ್ದು, ಅವರು ಇನ್ನೂ ಬಡವರಾಗಿ, ಆಂತರಿಕ ಮಾರುಕಟ್ಟೆಯು ನಿರಂತರವಾಗಿ ಮತ್ತು ದೃಢವಾಗಿ ವಿಸ್ತಾರಗೊಳ್ಳುವುದನ್ನು ತಡೆಯುತ್ತದೆ."

1968ರಲ್ಲಿ ಚರ್ಚೆ :

ಮುಂದಿನ ವರ್ಷಗಳಲ್ಲಿ ಏನಾಯಿತೆಂಬುದು ಈಗ ಸ್ಪಷ್ಟವಾಗಿದೆ. ಎರಡು ಮತ್ತು ಮೂರನೇ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಯೋಜನಾ ಪ್ರಕ್ರಿಯೆಯ ವಿಸ್ತಾರವಾದ ಪರಿಶೀಲನೆಯನ್ನು ನಡೆಸಿದ್ದ ನಾನು 1968ರಲ್ಲಿ ಸಿದ್ಧಪಡಿಸಿದ್ದ ಲೇಖನವೊಂದರಲ್ಲಿ ಹೀಗೆ ಹೇಳಿದ್ದೆ.

(ಅ) ನಾಲ್ಕನೇ ಪಂಚವಾರ್ಷಿಕ ಯೋಜನೆಯ ಆರಂಭದ ದಿನಾಂಕವನ್ನು (1964-69) ಮುಂದೂಡುವುದು, ಇಡೀ ಯೋಜನೆ ಪ್ರಕ್ರಿಯೆಯಲ್ಲಿರುವ ಬಿಕ್ಕಟ್ಟನ್ನು ಸೂಚಿಸುತ್ತದೆ;

(ಆ) ಯೋಜನಾ ಪ್ರಕ್ರಿಯೆಯ ಈ ಬಿಕ್ಕಟ್ಟಿನ ಹೊಣೆಯನ್ನು ಚೀನ ಮತ್ತು ಪಾಕಿಸ್ತಾನದ ಜೊತೆಗಿನ ಗಡಿ ಘರ್ಷಣೆ ಅಥವಾ ಎರಡು ವರ್ಷಗಳ ಬರಗಾಲದ ಮೇಲೆ ಹಾಕಿದರೆ ನಮ್ಮನ್ನು ನಾವೆ ಮೋಸಗೊಳಿಸಿಕೊಂಡಂತಾಗುತ್ತದೆ ಮತ್ತು ಜನತೆಯನ್ನೂ ಮೋಸಗೊಳಿಸಿದಂತಾಗುತ್ತದೆ.

(ಇ) ಆರ್ಥಿಕತೆಯ ಅತಿಶೀಘ್ರ ಕೈಗಾರಿಕೀಕರಣ ಮತ್ತು ಸಾಮಾಜಿಕ-ಆರ್ಥಿಕ ಚಟುವಟಿಕೆಗಳ ಎಲ್ಲ ಕ್ಷೇತ್ರಗಳಲ್ಲೂ ಆಧುನೀಕರಣಕ್ಕಾಗಿ ದೇಶದ ಎಲ್ಲ ಸಂಪತ್ತು ಮತ್ತು ಮಾನವ ಸಂಪತ್ತಿನ ಗರಿಷ್ಠ ಬಳಕೆ-ಎಂಬ ಯೋಜನೆಯ ಮುಖ್ಯ ಗುರಿಯ ಈಡೇರಿಕೆಯಲ್ಲಿ ಅನುಸರಿಸಿದ ನೀತಿಗಳು ಅಸಮರ್ಪಕವಾಗಿರುವುದೇ ಯೋಜನಾ ಪ್ರಕ್ರಿಯೆಯ ಬಿಕ್ಕಟ್ಟಿನ ಮೂಲ.

ವಿಭಿನ್ನ ಮೂಲದೃಷ್ಟಿಕೋನ :

ನಾನು ನೇತೃತ್ವವಹಿಸಿದ್ದ ಆಗಿನ ಕೇರಳ ಸರ್ಕಾರವು, ಯೋಜನೆಯ ವಿಧಾನಗಳು ಮತ್ತು ಉದ್ದೇಶಗಳ ಬಗ್ಗೆ (ರಾಜ್ಯಕ್ಕಲ್ಲ ದೇಶಕ್ಕಾಗಿ) ಒಂದು ಅರ್ಥಪೂರ್ಣ ಚರ್ಚೆಯನ್ನು ಆರಂಭಿಸಲು ಮತ್ತು ಯೋಜನಾ ಬಿಕ್ಕಟ್ಟನ್ನು ಪರಿಹರಿಸಲು ಪರ್ಯಾಯ ನೀತಿಗಳನ್ನು ರೂಪಿಸಲು ಉತ್ಸಾಹ ತೋರಿಸಿತು. ಕೇರಳ ಸರ್ಕಾರದಲ್ಲಿ ಆಗ ಇದ್ದ ಯೋಜನಾಸಂಸ್ಥೆಯ ಸಹಾಯವನ್ನು ಉಪಯೋಗಿಸಿಕೊಂಡು, ಪರ್ಯಾಯ ನೀತಿಗಳನ್ನು ರಾಷ್ಟ್ರೀಯ ಅಭಿವೃದ್ಧಿ ಸಮಿತಿಯ ಮುಂದೆ ಇಡಲಾಯಿತು. ಈ ಕಾರ್ಯಕ್ಕೆ ಅನುಗುಣವಾಗಿ ನಾನು ರಾಷ್ಟ್ರೀಯ ಅಭಿವೃದ್ಧಿ ಸಮಿತಿಯ ಚರ್ಚೆಯಲ್ಲಿ ಪ್ರವೇಶಿಸಿ, ನಾಲ್ಕನೇ ಪಂಚವಾರ್ಷಿಕ ಯೋಜನೆಯ ಕರಡನ್ನು ವಿರೋಧಿಸಿ ಮತ ಹಾಕಿದೆ. ಏಕೆಂದರೆ ಅದು ದೇಶವನ್ನು ಮತ್ತಷ್ಟು ಆಳವಾದ ಬಿಕ್ಕಟ್ಟಿಗೆ ಕೊಂಡೊಯ್ಯುತ್ತದೆ ಎಂದು ನಾನು ನಂಬಿದ್ದೆ.

1956ರಲ್ಲಿ ಐಕ್ಯ ಕಮ್ಯುನಿಸ್ಟ್ ಪಕ್ಷವು ರೂಪಿಸಿದ್ದ ಪರ್ಯಾಯ ನೀತಿಗಳು ಮತ್ತು 1968ರಲ್ಲಿ ಕೇರಳ ಸರ್ಕಾರವು ಅದನ್ನು ಮುಂದುವರಿಸಿ ರೂಪಿಸಿದ್ದ ಪರ್ಯಾಯ ನೀತಿಗಳು ಇವೆಲ್ಲವೂ ಎಡ ಚಳುವಳಿಯವರಾದ ನಾವು, ಕೇಂದ್ರದ ಹಿಂದಿನ ಮತ್ತು ಇಂದಿನ ಸರ್ಕಾರಗಳು ಮತ್ತು ಅವುಗಳ ಯೋಜನಾ ವ್ಯವಸ್ಥೆಗಳಿಗಿಂತ ಭಿನ್ನವಾದ ಮೂಲದೃಷ್ಟಿಕೋನವನ್ನು ಹೊಂದಿದ್ದೇವೆಂಬುದನ್ನು ತೋರಿಸುತ್ತವೆ. ಅಲ್ಲದೆ ಎಡಪಕ್ಷಗಳು ರೂಪಿಸಿದ ಪರ್ಯಾಯ ನೀತಿಗಳ ದೃಷ್ಟಿಕೋನವು, ಮೂರು ರಾಜ್ಯಗಳಲ್ಲೂ, ಕೇಂದ್ರದಲ್ಲಿ ಕಾಂಗ್ರೆಸ್ (ಐ) ಪಡೆದದ್ದೇ "ಅಪಾರ ಪಾಪ"ಗಳನ್ನು ಪಡೆದಿವೆ. ಈ ಎರಡು ಬಗೆಯ ನೀತಿಗಳು, ಭಾರತದಲ್ಲಿ ಯೋಜನೆಯ ಬಗ್ಗೆ ಇರುವ ಎರಡು ದೃಷ್ಟಿಕೋನಗಳ ಗುಣದೋಷಗಳ ಬಗ್ಗೆ ಚರ್ಚೆ ನಡೆಯಬೇಕಾದ ಅಗತ್ಯವನ್ನು ಇದು ತೋರಿಸುತ್ತದೆ.

(1968ರಲ್ಲಿ ಇದ್ದಂತೆ) ಎಡ ಚಳುವಳಿಯು ಒಂದು ರಾಜ್ಯದಲ್ಲಿ ಮಾತ್ರ ಸರ್ಕಾರ ರಚಿಸಿದ್ದ ಹಾಗಿಲ್ಲದೆ ಅದೃಷ್ಟವಶಾತ್ ಮೂರು ರಾಜ್ಯಗಳಲ್ಲಿ ಇಂದು ಸರ್ಕಾರ ರಚಿಸಿದೆ ಕೇಂದ್ರವು ರೂಪಿಸಿದ ನೀತಿಗಳಿಗೆ ಪರ್ಯಾಯವಾಗಿ ಅವು ಮೂರೂ ಒಟ್ಟಾಗಿ ಬೇರೆ ನೀತಿ ರಚಿಸಬಹುದು ಅಲ್ಲದೆ 1968ರಲ್ಲಿ ಕೇರಳ ಹೊಂದಿದ್ದಕ್ಕಿಂತ ಉತ್ತಮವಾದ ಯೋಜನಾ ವ್ಯವಸ್ಥೆಯನ್ನು ಈ ಮೂರು ರಾಜ್ಯಗಳು ಇಂದು ಹೊಂದಿವೆ. ಬೇರೆ ಎಲ್ಲಗಳಿಗಿಂತ ಹೆಚ್ಚು ಬಲಿಷ್ಠವಾಗಿರುವ ಪಂಚಾಯತ್‌ರಾಜ್ ಸಂಸ್ಥೆ ಈ ಮೂರು ರಾಜ್ಯಗಳಲ್ಲಿ ಇವೆ.

ಆದ್ದರಿಂದಲೇ ಅಂಥ ಯೋಜನಾ ವ್ಯವಸ್ಥೆಗಳನ್ನು ಹೊಂದಿರುವ ಈ ಮೂರು ರಾಜ್ಯಗಳು "ಯೋಜನಾ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಬೇಕೆಂದು" ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಆಶಿಸುತ್ತದೆ.

ಭಾರತೀಯ ಯೋಜನೆಯ ಆಭಾಸ :

ಭಾರತದ ಯೋಜನೆಯ ಆಭಾಸಗಳ ಕಡೆ ಗಮನವನ್ನು ಸೆಳೆಯುವುದಕ್ಕಾಗಿ ಈ "ರಾಷ್ಟ್ರೀಯ" ದಿನಪತ್ರಿಕೆಗಳ ಸಂಪಾದಕರು ನಮ್ಮನ್ನು ಮನ್ನಿಸಬೇಕು. ಭಾರತದ ಯೋಜನೆಗಳು ಮತ್ತು ಸಮಾಜವಾದ ಚೀನದ ಯೋಜನೆಗಳು ಎರಡನ್ನೂ ಹೋಲಿಸಿದ, ರಾಜಕೀಯ ತಜ್ಞರಲ್ಲದವರೊಬ್ಬರು (UNCTADನ ಸುರೇಂದ್ರ ಪಟೇಲ್) ಹೀಗೆ ಹೇಳುತ್ತಾರೆ:

"ಸ್ವಾತಂತ್ರ್ಯ ಪಡೆದಾಗ, ಚೀನದ ಯುದ್ಧಗಳಿಂದ ಜರ್ಜರಿತವಾದದ್ದಕ್ಕಿಂತ ಉತ್ತಮವಾದ ಕೈಗಾರಿಕಾ ವ್ಯವಸ್ಥೆ ಭಾರತಕ್ಕಿತ್ತು. 1950ರಿಂದೀಚೆಗೆ ಎರಡು ದೇಶಗಳೂ ಅಪಾರ ಏರಿಳಿತಗಳನ್ನು ಅನುಭವಿಸಿವೆ. ಯಾರ ಸಂಕಷ್ಟಗಳು ಹೆಚ್ಚಿದ್ದವು ಎಂದು ಸ್ಪರ್ಧೆಗೆ ತೊಡಗಿಸುವುದು ಇಲ್ಲಿನ ಉದ್ದೇಶವಲ್ಲ. ಅವರ ಸಮಸ್ಯೆಗಳ ಸ್ವಭಾವ ಮತ್ತು ಪ್ರಮಾಣ ಹೇಗೆ ಇರಲಿ, ಉತ್ಪಾದನಾ ರಂಗದಲ್ಲಿ ಈ ಎರಡು ದೇಶಗಳ ಸಾಧನೆ ತುಂಬ ಭಿನ್ನವಾಗಿದೆ" ಎಂದು ಹೇಳಿ ಅವರು ಚೀನದ ಕಲ್ಲಿದ್ದಲು ಉತ್ಪಾದನೆ ಭಾರತದಕ್ಕಿಂತ 6.1ರಷ್ಟು ಹೆಚ್ಚಾಗಿದೆ, ಅಶುದ್ಧ ಎಣ್ಣೆ 9.5 ರಷ್ಟು, ಮರಮುಟ್ಟುಗಳು 5.8ರಷ್ಟು ಅಶುದ್ಧ ಕಬ್ಬಿಣ 3.5 ರಷ್ಟು, ಉಕ್ಕು 3 2 ರಷ್ಟು, ಸಿಮೆಂಟ್ 3.3 ರಷ್ಟು ರಾಸಾಯನಿಕ ಗೊಬ್ಬರ 3.2 ರಷ್ಟು, ಬೈಸಿಕಲ್ಲುಗಳು 3.2ರಷ್ಟು, ವಿದ್ಯುತ್ 2 6 ರಷ್ಟು, ಯಂತ್ರಸಾಧನಗಳು 2.6 ರಷ್ಟು ಹೆಚ್ಚಾಗಿ ಉತ್ಪಾದನೆಯಾಗುತ್ತವೆ ಎಂದು ಅವರು ಹೇಳುತ್ತಾರೆ.

ಆಳುವವರ್ಗಗಳು ತಮ್ಮ ವರ್ಗ ನೀತಿಯನ್ನು ಅನುಸರಿಸದೆ ಇದ್ದಿದ್ದರೆ, ಬಂಡವಾಳಶಾಹಿ-ಭೂಮಾಲೀಕ ವರ್ಗಗಳಿಗೆ ಲಾಭ ಮತ್ತು ಅಧಿಕಾರಗಳನ್ನು ನೀಡುವ ದಾರಿಗಳನ್ನು ಸಿದ್ಧಮಾಡದೆ ಇದ್ದಿದ್ದರೆ, ವಿಕೇಂದ್ರೀಕೃತ ಪ್ರಜಾಪ್ರಭುತ್ವವಾದಿ ವ್ಯವಸ್ಥೆ ಹೊಂದಿದ್ದರೆ, ಭಾರತವೂ, ಚೀನದ ಮಟ್ಟದಲ್ಲೇ ಅಭಿವೃದ್ಧಿ ಸಾಧಿಸಿರುತ್ತಿತ್ತು ಎನ್ನುವುದು ನಮ್ಮ ಅನಿಸಿಕೆ. ಕಾಂಗ್ರೆಸ್, ಜನತಾ, ಲೋಕದಳ-ಕಾಂಗ್ರೆಸ್ ಮತ್ತು ಈಗ ಕಾಂಗ್ರೆಸ್ (ಐ) ಸರ್ಕಾರಗಳು ಅನುಸರಿಸುತ್ತಿರುವ ನೀತಿಗಳು ಮತ್ತು ಎಡ ಮತ್ತು ಪ್ರಜಾಪ್ರಭುತ್ವವಾದಿ ಚಳುವಳಿಯು ತರಲು ಹೋರಾಡುತ್ತಿರುವ ನೀತಿಗಳು-ಈ ಎರಡರ ಬಗ್ಗೆ ಸಾರ್ವಜನಿಕ ಚರ್ಚೆ ಆಗಬೇಕೆಂದು ಕೇಳುವುದೇ ದೊಡ್ಡ "ಪಾಪಕೃತ್ಯ"ವಾಗಿಬಿಟ್ಟಿದೆ.

ಘರ್ಷಣೆ-ಯಾರದು?

ರಾಷ್ಟ್ರೀಯ ಅಭಿವೃದ್ಧಿ ಸಮಿತಿಯು ಆರನೇ ಯೋಜನೆಯ ಬಗ್ಗೆ (ಯೋಜನಾ ಆಯೋಗ ಮತ್ತೆ ರಚಿತವಾಗಿ, ಯೋಜನೆಯ ಬಗ್ಗೆ ಅರ್ಥಪೂರ್ಣ ಚರ್ಚೆ ನಡೆದಾಗ) ಆಲೋಚಿಸುವಾಗ ಈ ಮೂರು ರಾಜ್ಯಗಳೂ ಒಟ್ಟಿಗೆ ಸೇರಿ ಅಲ್ಲಿನ ಚರ್ಚೆಯಲ್ಲಿ ಭಾಗವಹಿಸುವುದು "ದೇಶ ವಿರೋಧಿ"ಯೆ? ಇದು ರಾಜ್ಯಗಳು ಕೇಂದ್ರದ ಜೊತೆ ನಡೆಸುವ ಘರ್ಷಣೆಯೆ? ಅಥವಾ ರಾಜ್ಯಗಳ ಹಕ್ಕುಗಳ ಮೇಲೆ ಆಕ್ರಮಣ ನಡೆಸಿ, ಕೇಂದ್ರವು ರಾಜ್ಯಗಳ ಜೊತೆ ಸಂಘರ್ಷಿಸುವ ವಿಧಾನವೆ?

●

ರಾಜಕೀಯ ಸಾಹಿತ್ಯಕ್ಕೆ ಸ್ಫೂರ್ತಿ : ಇ. ಎಂ. ಎಸ್.

ನಿಜವಾದ ಸಾಹಿತಿಗೆ ರಾಜಕೀಯ ಮತ್ತು ಜನ ಹೋರಾಟಗಳು ಸ್ಫೂರ್ತಿ ನೀಡಬಲ್ಲದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕ ಇ. ಎಂ. ಎಸ್. ನಂಬೂದಿರಿಪಾದ್ ನುಡಿದರು.

ಬಂಡಾಯ ಸಾಹಿತ್ಯ ಸಂಘಟನೆಯ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಇತ್ತೀಚೆಗೆ ಏರ್ಪಟ್ಟಿದ್ದ ಸಾಹಿತಿಗಳ ಶಿಬಿರವೊಂದರಲ್ಲಿ ಭಾಗವಹಿಸಿದ್ದ ಇ. ಎಂ. ಎಸ್ ರು 'ರಾಜಕಾರಣ ಮತ್ತು ಸಾಹಿತ್ಯ' ಎಂಬ ವಿಷಯದ ಮೇಲೆ ಉಪನ್ಯಾಸ ಕೊಟ್ಟರು.

"ನಿಜವಾದ ಅರ್ಥದಲ್ಲಿ ರಾಜಕೀಯ ಎಂದರೆ, ಬದಲಾಗುತ್ತಿರುವ ಸಮಾಜದಲ್ಲಿ ಅಧಿಕಾರಕ್ಕಾಗಿ ನಡೆಸುವ ಹೋರಾಟ. ಆದ್ದರಿಂದಲೇ ಇದು ವಾಸ್ತವ ಸಮಾಜದ ಚಿತ್ರಣ ನೀಡಲು ಹೊರಡುವ ಸಾಹಿತಿಗೆ ಸ್ಫೂರ್ತಿ ನೀಡಬಲ್ಲದು. ಜೊತೆಗೆ ಸಾಹಿತ್ಯದ ಸೆಲೆಯೂ ಆಗಬಲ್ಲದು" ಎಂದು ನಂಬೂದಿರಿಪಾದ್ ತಿಳಿಸಿದರು.

ಬರಹಗಾರನೆಂದರೆ ದಂತಗೋಪುರದಲ್ಲಿ ಕುಳಿತು ಕೃತಿರಚನೆಯಲ್ಲಿ ತೊಡಗಿದವನಲ್ಲ. ಆತ ತಾನು ಬದುಕುತ್ತಿರುವ ಸಮಾಜದೊಂದಿಗೆ, ಕಾಲದೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡವನು" ಎಂದು ಇ. ಎಂ. ಎಸ್. ವಿವರಿಸಿದರು.

ಉತ್ತಮ ಕೃತಿ :

"ರಾಜಕೀಯಕ್ಕೆ, ರಾಜಕೀಯ ಪಕ್ಷಕ್ಕೆ ಅಥವ ಒಂದು ಸಿದ್ಧಾಂತಕ್ಕೆ ಬದ್ಧನಾಗುವಷ್ಟರಿಂದಲೇ ಒಬ್ಬ ಲೇಖಕ ಉತ್ತಮ ಕೃತಿಯನ್ನು ಸೃಷ್ಟಿಸಲಾರ. ಹಾಗೆಯೇ ಬದ್ಧನಾಗದೆ ಹೊರಗುಳಿಯುವುದರಿಂದಲೂ ಉತ್ತಮ ಕೃತಿ ಸೃಷ್ಟಿಯಾಗುವುದಿಲ್ಲ. ಲೇಖಕ ಬದ್ಧನಾಗಿರಲಿ ಇಲ್ಲದಿರಲಿ ಬದಲಾಗುತ್ತಿರುವ ಸಮಾಜವನ್ನು ತೀರಾ ಹತ್ತಿರದಿಂದ, ವಾಸ್ತವ ದೃಷ್ಟಿಯಿಂದ ನೋಡಿ ಅದನ್ನು ತನ್ನ ಕೃತಿಯಲ್ಲಿ ಬಿಂಬಿಸಿದಾಗ ಮಾತ್ರ ಉತ್ತಮ ಕೃತಿಯ ಸೃಷ್ಟಿ ಸಾಧ್ಯ" ಎಂದು ಇ. ಎಂ. ಎಸ್. ತಿಳಿಸಿದರು.

ನೀವು ಘೋಷಿಸಿಕೊಳ್ಳಿ ಅಥವ ಘೋಷಿಸಿಕೊಳ್ಳದಿರಿ ವಾಸ್ತವ ಸಮಾಜಕ್ಕೆ ಸ್ಪಂದಿಸಿ ಕೃತಿ ರಚಿಸಿದಾಗ ನೀವು ಕ್ರಾಂತಿಕಾರಿ ಲೇಖಕರಾಗುತ್ತೀರಿ ಎಂದು ಕಿಕ್ಕಿರಿದು ನೆರೆದಿದ್ದ ಯುವ ಬರಹಗಾರರಿಗೆ ನಂಬೂದಿರಿಪಾದ್ ಹೇಳಿದರು.

ಪ್ರಗತಿಶೀಲ ಚಳುವಳಿ :

"ಪ್ರಗತಿಶೀಲಚಳುವಳಿಯು ನಮ್ಮಲ್ಲಿ ಬಂದದ್ದು ಒಂದು ಹೊಸ ಸಾಮಾಜಿಕ-ಆರ್ಥಿಕ ಶಕ್ತಿಯ ಪ್ರತಿನಿಧಿಯಾಗಿ ಬಡವರು ಶ್ರೀಮಂತರ ವಿರುದ್ಧ ನಡೆಸಿದ ಹೋರಾಟವನ್ನು ಈ ಚಳುವಳಿಯು ಸ್ಪಷ್ಟವಾಗಿ ತೋರಿಸುತ್ತದೆ. ನಂತರ ಈ ಚಳುವಳಿಯು ಪ್ರತಿಯೊಂದು ಭಾಷೆಯಲ್ಲಿಯೂ ಅನೇಕ ಬರಹಗಾರರಿಗೆ ಮಾರ್ಗದರ್ಶಿಯಾಯಿತು" ಎಂದು ಇ. ಎಂ. ಎಸ್. ಹೇಳಿದರು.

"ಭಕ್ತಿ ಮಾರ್ಗದ ಸಾಹಿತ್ಯದಲ್ಲಿ ಜಾತಿಯು ರಾಜಕೀಯ ಅಂಶವಾಗಿ ಕಾಣಿಸಿಕೊಂಡಿತು. ಕೆಳ ಜಾತಿಗಳವರು ನಡೆಸಿದ ಕ್ರಾಂತಿಯಾಗಿಯೂ ಈ ಸಾಹಿತ್ಯ ಹುಟ್ಟಿಕೊಂಡಿತು. ಭಾರತದ ಎಲ್ಲ ಭಾಷೆಗಳಲ್ಲೂ ಸ್ವಲ್ಪ ಹೆಚ್ಚು ಕಡಿಮೆ ಏಕ ಕಾಲದಲ್ಲಿ ಭಕ್ತಿ ಸಾಹಿತ್ಯ ಬಂದಿತು" ಎಂದು ಇ. ಎಂ. ಎಸ್. ವಿಶ್ಲೇಷಿಸಿದರು.

ಮೂರು ದಿವಸಗಳ ಕಾಲ ಜರುಗಿದ ಈ ಸಾಹಿತ್ಯ ಶಿಬಿರದಲ್ಲಿ ಎಂಬತ್ತು ತರುಣ ಲೇಖಕ-ಲೇಖಕಿಯರು ಪಾಲ್ಗೊಂಡಿದ್ದರು. ಹಿರಿಯ ಸಾಹಿತಿಗಳಾದ ಗೊರೂರು ರಾಮಸ್ವಾಮಿ ಐಯ್ಯಂಗಾರ್, ಬೀಚಿ, ಶ್ರೀರಂಗ ಇವರೊಡನೆ ಪ್ರತಿದಿನ ಸಂಜೆ ತರುಣ ಸಾಹಿತಿಗಳು ಸಂವಾದ ನಡೆಸಿದರು. ಖ್ಯಾತ ತರುಣ ಸಾಹಿತಿಗಳಾದ ಪಿ. ಲಂಕೇಶ್, ಯಶವಂತ ಚಿತ್ತಾಲ, ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಚಂದ್ರಶೇಖರ ಪಾಟೀಲ, ಕಾಳೇಗೌಡ ನಾಗವಾರ, ಬರಗೂರು ರಾಮಚಂದ್ರಪ್ಪ, ಚೆನ್ನಣ್ಣ ವಾಲೀಕಾರ, ವಿಜಯ ಸುಬ್ರಮಣ್ಯಂ, ಬಿ.ವಿ. ವೈಕುಂಠರಾಜು, ರಮಜಾನದರ್ಗ ಮುಂತಾದವರು ಶಿಬಿರದಲ್ಲಿ ಪಾಲ್ಗೊಂಡಿದ್ದರು.

●

ಆರ್ಥಿಕ ಸಮೀಕ್ಷೆ:

(3ನೇ ಪುಟದಿಂದ)

1970-71ರಲ್ಲಿ ಸಂಘಟಿತ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಉತ್ಪಾದನೆಯಿಂದ ಗಳಿಸಿದ ಅಧಿಕ ಮೌಲ್ಯವು 100 ಎಂದಾದರೆ, ಕೂಲಿ, ವೇತನ ರೂಪದಲ್ಲಿ ನೌಕರರ ಪಾಲು 71.2 ಆಗಿತ್ತು. ಬಡ್ಡಿ, ಬಾಡಿಗೆ, ಮತ್ತು ಲಾಭಗಳ ರೂಪದಲ್ಲಿ ಮಾಲಕರ ಪಾಲು 29.8 ಆಗಿತ್ತು. ಆದರೆ, 1976-77ರಷ್ಟರಲ್ಲಿ ಇಂದಿರಾಗಾಂಧಿಯ ತುರ್ತುಪರಿಸ್ಥಿತಿಯ ಆಡಳಿತದಿಂದ ನೌಕರರ ಪಾಲು 66.4ಕ್ಕಿಳಿಯಿತು ಮತ್ತು ಮಾಲಕರ ಪಾಲು 33.6ಕ್ಕೇರಿತು! ಹಾಗಾದರೆ, ಸಂಘಟಿತ ಕಾರ್ಮಿಕರ ಸದ್ದಡಗಿಸಿ ಅವರ ವೇತನ ಸ್ಥಗಿತಗೊಳಿಸಿ 'ಬಡವರಿಗೆ' ಕೊಟ್ಟಿದ್ದಲ್ಲ. ಬಂಡವಾಳಶಾಹಿಗಳಿಗೆ ಕೊಟ್ಟಿದ್ದು, ಅಧಿಕ ಮೌಲ್ಯಗಳಿಸಿದ್ದರಲ್ಲಿ ಅವರ ಪಾಲು ಹೆಚ್ಚಿಸಿದ್ದು. ಬಡವರು ಇನ್ನಷ್ಟು ಬಡವರಾಗುತ್ತಾ ಬಂದರು. ಹೋರಾಟದ ಮಾರ್ಗದಿಂದ ಸಂಘಟಿತ ಕಾರ್ಮಿಕರು ನೌಕರರು ತಮ್ಮ ವೇತನ ಹಾಗೂ ಜೀವನ ಮಟ್ಟವನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಿದ್ದುದನ್ನೂ ಸರಕಾರದ ಹಸ್ತಕ್ಷೇಪದಿಂದ ನಿಲ್ಲಿಸಿ ಅವರ ಆದಾಯವನ್ನು ಸ್ಥಗಿತಗೊಳಿಸಿದ್ದೇ ಅಲ್ಲದೆ ಬಲಾತ್ಕಾರದಿಂದ ಕಡಿಮೆಗೊಳಿಸಲಾಯಿತು! ನೌಕರರ ಪಾಲು ಎಂದು ಇಲ್ಲಿ ತೋರಿಸಿದುದರಲ್ಲಿ ಕೈಗಾರಿಕೆಗಳ ಉಚ್ಚ ಅಧಿಕಾರಿಗಳ ಸಂಬಳವೂ ಸೇರಿದೆ. ಆದುದರಿಂದ ಕೇವಲ ಕಾರ್ಮಿಕರ ನೌಕರರ ಸಂಬಳವನ್ನು ಗಣನೆಗೆ ತೆಗೆದುಕೊಂಡರೆ, ಅಧಿಕ ಮೌಲ್ಯದಲ್ಲಿ ಅವರ ಪಾಲು ಇನ್ನಷ್ಟು ಕಡಿಮೆ ಆಗಿರುವುದನ್ನು ಗಮನಿಸಬಹುದು. ಖಾಸಗಿ ಕ್ಷೇತ್ರದಲ್ಲಿ ಸಾರ್ವಜನಿಕ ಕ್ಷೇತ್ರಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ನೌಕರರ ಪಾಲು ಕಡಿಮೆಯಾಗಿರುವುದನ್ನೂ ಮಾಲಕರ ಪಾಲು ಹೆಚ್ಚಿರುವುದನ್ನೂ ಗಮನಿಸಬಹುದು.

1980ರ ಚುನಾವಣೆಯಲ್ಲಿ ಮತ್ತೆ ಅಧಿಕಾರಕ್ಕೆ ಬಂದದು ಇಂದಿರಾಗಾಂಧಿಯ ಭದ್ರ ಸರಕಾರದಿಂದ ನಾವೇನನ್ನು ನಿರೀಕ್ಷಿಸಬಹುದು? ಉತ್ಪಾದನೆ ಹೆಚ್ಚಬಹುದೆ? ನಿರುದ್ಯೋಗ ನಿವಾರಣೆಯಾಗುವುದೆ? ಬೆಲೆಏರಿಕೆ ನಿಲ್ಲುವುದೆ? ರಾಷ್ಟ್ರೀಯ ಆದಾಯದಲ್ಲಿ, ಜೀವನಾವಶ್ಯಕ ವಸ್ತುಗಳ ಪೂರೈಕೆಯಲ್ಲಿ, ಅಧಿಕ ಮೌಲ್ಯದ ಪಾಲಿನಲ್ಲಿ ಜನಸಾಮಾನ್ಯರ, ರೈತರ, ಕಾರ್ಮಿಕರ ಮತ್ತು ಸಂಘಟಿತ ನೌಕರರ ಪಾಲು ಹೆಚ್ಚಾಗಬಹುದೆ? ಬಂಡವಾಳಶಾಹಿಗಳ ಭೂಮಾಲಕರ ಪಾಲು ಕಡಿಮೆಯಾಗಬಹುದೆ? ಸ್ವಾತಂತ್ರ್ಯೋತ್ತರದ ಮೂರು ದಶಕಗಳ, ಮುಖ್ಯವಾಗಿ ಇಂದಿರಾಗಾಂಧಿಯ ಒಂದು ದಶಕದ ಆಳ್ವಿಕೆಯ ಅನುಭವದಿಂದ ಇಂತಹ ಬದಲಾವಣೆ ಆದೀತೆಂದು ನಿರೀಕ್ಷಿಸುವುದು ಬರಿಯ ಭ್ರಮೆ?

O

ಕೇರಳ:

ಮುಂಗಡಪತ್ರ: ದಾರಿದ್ರ್ಯ ವಿಮೋಚನೆಗೆ ದಾರಿ

1980-81ನೇ ವರ್ಷದ 5.67 ಕೋಟಿ ರೂಗಳ ಉಳಿತಾಯವಿರುವ ಕೇರಳ ಬಜೆಟನ್ನು ಆರ್ಥಿಕ ಸಚಿವ ಶ್ರೀ ಕೆ. ಎಂ. ಮಾಣಿಯವರು ಮಂಡಿಸಿದರು. ಹೊಸ ತೆರಿಗೆಗಳಿಲ್ಲದ ಅದೇ ಸಂದರ್ಭದಲ್ಲಿ ಅನೇಕ ಸಮಾಜ ಕಲ್ಯಾಣದ ಕಾರ್ಯಕ್ರಮಗಳನ್ನೊಳಗೊಂಡ ಬಜಟ್ ಭಾರತ ಸಮಾಜ ವ್ಯವಸ್ಥೆಯಲ್ಲಿನ ಒಂದು ಮೈಲಿಗಲ್ಲೆಂದು ಹೇಳಬಹುದು. ಅವರು ಮಂಡಿಸಿದ ಸುಧಾರಣೆ ಪದ್ಧತಿಗಳೇನು?

ದುಡಿಯಲು ಅಶಕ್ತರಾದ ದಾರಿದ್ರ್ಯದ ಸುಳಿಯಿಂದ ವಿಮೋಚನೆಯಿಲ್ಲದೆ ನರಳುತ್ತಿರುವ 60 ವಯಸ್ಸು ಪೂರ್ತಿಯಾದ ಕೃಷಿಕೂಲಿಗಾರರಿಗೆ ಪ್ರತಿ ತಿಂಗಳು 45 ರೂಗಳಂತೆ ನಿವೃತ್ತಿ ವೇತನ ಇದಕ್ಕಾಗಿ ಈ ವರ್ಷದಲ್ಲಿ 7 ಕೋಟಿ ರೂಗಳನ್ನು ಇರಿಸಿದ್ದಾರೆ. ಭಾರತದಲ್ಲಿ ಪಶ್ಚಿಮ ಬಂಗಾಳದ ಕಾಂ. ಜ್ಯೋತಿಬಸುರವರ ಸರ್ಕಾರ ಮಾತ್ರ ಮೊಟ್ಟಮೊದಲನೆಯದಾಗಿ ಕೃಷಿಕೂಲಿಗಾರರಿಗೆ ನಿವೃತ್ತಿ ವೇತನ ಪದ್ಧತಿಯನ್ನು ಜಾರಿಗೆ ತಂದಿದೆ.

ಕೆಲಸವಿಲ್ಲದ ವಿದ್ಯಾವಂತ ಯುವಕರಿಗೆ ಪ್ರತಿ ತಿಂಗಳು 50ರೂಗಳ ನಿರುದ್ಯೋಗ ವೇತನ, ಭಾರತದಲ್ಲಿ ಪ್ರಪ್ರಥಮವಾಗಿ ಶಾಲಾ ಮಕ್ಕಳಿಗೆ ಆರೋಗ್ಯ ಚೀಟಿ (Health Card) ಏರ್ಪಡಿಸಿದೆ. ಅಂದರೆ ಶಾಲೆಗೆ ಹೋಗುವ ವಿದ್ಯಾರ್ಥಿಗಳ ಆರೋಗ್ಯವನ್ನು ಪರೀಕ್ಷಿಸುವ ಸಲುವಾಗಿ ಎಲ್ಲಾ ವಿಧದ ಉಪಕರಣಗಳನ್ನೊಳಗೊಂಡ ಚಲಿಸುವ ಗಾಡಿ (Mobile Van) ಹಾಗೂ ಡಾಕ್ಟರುಗಳು ಪ್ರತಿಯೊಂದು ವಿದ್ಯಾರ್ಥಿಗಳನ್ನು ಪರೀಕ್ಷಿಸಿ ಅವರಿಗೆ ಆರೋಗ್ಯ ಚೀಟಿಗಳನ್ನು ಕೊಡುವರು. ಅದರಲ್ಲಿ ಅವರ ಆರೋಗ್ಯ ಸ್ಥಿತಿಯನ್ನು ಗುರಿಪಡಿಸಿರುತ್ತದೆ. ಅದರ ಪ್ರಕಾರ ಅವರಿಗೆ ಸೂಕ್ತ ಚಿಕಿತ್ಸೆಯನ್ನು ಮಾಡುವುದು.

ಸಮುದ್ರದಲ್ಲಿ ಮೀನು ಹಿಡಿಯಲು ಹೋಗುವ ಪ್ರತಿಯೊಂದು ಬೆಸ್ತರಿಗೂ 10 ಸಾವಿರ ರೂ.ಗಳ ಜೀವ ವಿಮಾ ಪದ್ಧತಿಯನ್ನು ಏರ್ಪಡಿಸಿದೆ. ಅವರು ಜೀವವಿಮಾ ಸಂಸ್ಥೆಗೆ ಸಲ್ಲಿಸಬೇಕಾದ ಕಂತುಗಳನ್ನು ಸರ್ಕಾರವೇ ಕಟ್ಟುತ್ತದೆ.

ಖಾಸಗಿ ಶಾಲಾ ಅಧ್ಯಾಪಕರಿಗೆ ಹಡ್‌ಕೊ (HUDCO) ಎಲ್. ಐ. ಸಿ. ಮುಂತಾದ ಸಂಸ್ಥೆಗಳಿಂದ ಸಾಲಗಳನ್ನು ಸ್ವಂತವಾಗಿ ಪಡೆದು ಮನೆಗಳನ್ನು ಕಟ್ಟಲು ಖಾಸಗಿ ಶಾಲಾ ಅಧ್ಯಾಪಕರ ವೆಲ್‌ಫೇರ್ ಸೊಸೈಟಿಗಳನ್ನು ಸರ್ಕಾರವು ಏರ್ಪಡಿಸುತ್ತದೆ. ಇದರ ಸಲುವಾಗಿ 5 ಕೋಟಿ ರೂ.ಗಳ ಒಂದು ಪದ್ಧತಿಯನ್ನು ಜಾರಿಗೆ ತರುವುದು. ಬಾಲವಾಡಿ ಅಧ್ಯಾಪಿಕೆಗಳಿಗೆ ಹೆಚ್ಚಿನ ಭತ್ಯ.

ಹರಿಜನರ ಸಹಕಾರ ಸಂಘಗಳಿಗೆ ನೀಡುವ ಸಾಲಗಳಿಗೆ ತೆರಿಗೆ ಇರುವುದಿಲ್ಲ. ಈಗಿರುವ ಸಾಲಗಳಿಗೆ ಕೊಡಬೇಕಾದ ತೆರಿಗೆಯನ್ನು ರದ್ದು ಮಾಡಲಾಗಿದೆ. ಅಂಗವಿಹೀನರಿಗೆ ಪ್ರತ್ಯೇಕ ಆರ್ಥಿಕ ಸಹಾಯ. ಭಿಕ್ಷುಕ ಮಂದಿರಗಳಿಗೆ ಹೆಚ್ಚಿನ ಸಹಾಯ, ಅನಾಥಾಲಯಗಳಿಗೆ ಹೆಚ್ಚಿನ ಆರ್ಥಿಕ ಸಹಾಯ, ನಿರಾಶ್ರಿತರಿಗೆ ರಕ್ಷಣೆ, ವಯನಾಡು ಜಿಲ್ಲೆಯೆಂಬ ಹೊಸ ಜಿಲ್ಲೆಯನ್ನು ರೂಪಿಸಿ, ಆ ಜಿಲ್ಲೆಯ ಹಿಂದುಳಿದ ಹಾಗೂ ಗುಡ್ಡಗಾಡು ಜನಾಂಗಗಳ ಏಳಿಗೆಗಾಗಿ ಒಂದು ಪದ್ಧತಿಯನ್ನು ತಂದಿರುವುದು ಈ ಬಜಟ್ಟಿನ ಒಂದು ವೈಶಿಷ್ಟ್ಯ.

ಶ್ರೀ ಮಾಣಿಯವರು ಮಂಡಿಸಿದ ಈ ಬಜೆಟ್ಟನ್ನು ಕೇರಳ ಪ್ರಮುಖ ಪತ್ರಿಕೆಗಳಾದ ಮಾತೃಭೂಮಿ, ಮಲಯಾಳ ಮನೋರಮ ಸ್ವಾಗತಿಸಿದೆ.

O

ಕಾಂ. ಎ.ಕೆ.ಜಿ. ದಿನಾಚರಣೆ

ಮಾರ್ಚ್ 22-ಕೇರಳದ ಜನತೆಗೆ ಎಂದೆಂದೂ ಮರೆಯಲಾಗದ ದಿನ. ಅಂದು ಎ. ಕೆ. ಜಿ. ನಮ್ಮನ್ನು ಬಿಟ್ಟಗಲಿದ ದಿನ. ಭಾರತ ಕಮ್ಯುನಿಸ್ಟ್ ಚಳುವಳಿಯ, ರೈತಕಾರ್ಮಿಕ ಜನಸಾಮಾನ್ಯರ ನಾಯಕ ಕಾಂ. ಎ. ಕೆ. ಜಿ. ಯವರು ನಮ್ಮನ್ನಗಲಿ ಮೂರು ವರ್ಷಗಳಾಗುತ್ತಿದೆ. ತ್ಯಾಗಪೂರ್ಣವಾದ ಬಾಳಿನ ಮೂಲಕ ಪ್ರಜಾಪ್ರಭುತ್ವ ಹಾಗೂ ಸಮಾಜವಾದದ ಗುರಿಯನ್ನು ಪಡೆಯಲು ತನ್ನ ಜೀವನವನ್ನೇ ಬಲಿದಾನ ಮಾಡಿದ ಕಾಂ. ಎ. ಕೆ. ಜಿ. ಯ ವರ್ದಂತಿಯನ್ನು ಕೇರಳದ ಮೂಲೆ ಮೂಲೆಗಳಲ್ಲಿಯೂ ವಿಚಾರ ಸಂಕಿರಣಗಳು, ಬಹಿರಂಗ ಸಭೆಗಳು, ಹಾಗೂ ಚರ್ಚಾ ಕೂಟಗಳ ಮೂಲಕ ಆಚರಿಸಿದರು.

ತಿರುವನಂತಪುರದ ಅನೇಕ ಕಡೆಗಳಲ್ಲಿ ಕಾಂ. ಎ. ಕೆ. ಜಿ. ಯ ಭಾವಚಿತ್ರಗಳನ್ನು ಅಲಂಕರಿಸಿ ಕೆಂಪು ತೋರಣಗಳನ್ನು ಕಟ್ಟಿ ಆಚರಿಸಿದರು. ಎ. ಕೆ. ಜಿ. ಸೆಂಟರಿನಲ್ಲಿ ಏರ್ಪಡಿಸಿದ ಸಭೆಯಲ್ಲಿ ಮುಖ್ಯಮಂತ್ರಿ ಕಾಂ. ಇ. ಕೆ. ನಯನಾರ್, ಸಚಿವರುಗಳಾದ ಆರ್ಯಾಡನ್ ಮಹಮದ್, ಆರ್. ಎಸ್. ಉಣ್ಣಿ ಮತ್ತು ಪಿ. ಎಂ. ಅಬೂಬಕ್ಕರ್ ಅವರುಗಳು ಎ. ಕೆ. ಜಿ. ಯನ್ನು ಸ್ಮರಿಸಿ ಅವರು ತೋರಿಸಿಕೊಟ್ಟ ದಾರಿಯಲ್ಲಿ ಮುನ್ನಡೆಯಲು ಕರೆಯಿತ್ತರು.

ಕಾಂ. ಎ. ಕೆ. ಜಿ.ಯ ಹುಟ್ಟೂರಾದ ಕಣ್ಣನೂರ್ ಜಿಲ್ಲೆಯ ಪೆರಳಕೇರಿ ನಗರವೇ ಅಂದು ಕೆಂಪು ತೋರಣಗಳಿಂದ ಅಲಂಕರಿಸಿ ಎಲ್ಲಿ ನೋಡಿದರೂ ಎ. ಕೆ. ಜಿ.ಯ ಭಾವಚಿತ್ರ, ಎಲ್ಲಿ ನೋಡಿದರೂ ಎ. ಕೆ. ಜಿ.ಯ ಬಗ್ಗೆ ಚರ್ಚಾಕೂಟಗಳು, ವಿಚಾರ ಸಂಕಿರಣಗಳು, ಕ್ರೀಡಾ ಸ್ಪರ್ಧೆಗಳು, ಸ್ಪರ್ಧೆಗಳಲ್ಲಿ ಗೆದ್ದವರಿಗೆ ಎ. ಕೆ. ಜಿ. ನೆನಪಾಗಿ ಬಹುಮಾನಗಳು. ಈ ಕಾರ್ಯಕ್ರಮಗಳಲ್ಲಿ ಸಹಸ್ರಾರು ಜನ ಕಾರ್ಮಿಕರು, ರೈತರು, ಕೃಷಿಕೂಲಿಗಾರರು, ವಿದ್ಯಾರ್ಥಿಗಳು, ಮಹಿಳೆಯರು ಭಾಗವಹಿಸಿದರು. ಕಣ್ಣಾನೂರಿನಲ್ಲಿ 2 ಲಕ್ಷ ರೂ.ಗಳ ಖರ್ಚಿನಲ್ಲಿ ನಿರ್ಮಿಸಿದ ಎ. ಕೆ. ಜಿ. ಹಾಲನ್ನು ಗೃಹ ಸಚಿವರಾದ ಕಾಂ. ಟಿ. ಕೆ. ರಾಮಕೃಷ್ಣನ್ ಉದ್ಘಾಟನೆ ಮಾಡಿದರು.

ಕಲ್ಲಿಕೋಟೆಯಲ್ಲಿ ನಡೆದ ವಿಚಾರ ಸಂಕಿರಣ ಹಾಗೂ ಬಹಿರಂಗ ಸಭೆಗಳಲ್ಲಿ ಕಾಂ. ಟಿ. ಕೆ. ರಾಮಕೃಷ್ಣನ್ ಭಾಗವಹಿಸಿದರು. ಕಾಂ. ಸಿ. ಹೆಚ್. ಕಣಾರನ್ ಸ್ಮಾರಕ ಮಂದಿರ ಪಕ್ಕದಲ್ಲಿ ಕಾಂ. ಎ. ಕೆ. ಜಿ. ಯ ನೆನಪಾಗಿ 500ಕ್ಕೂ ಹೆಚ್ಚು ಜನರು ಕುಳಿತುಕೊಳ್ಳಬಹುದಾದ ಒಂದು ಹಾಲನ್ನೂ ಕಾಂ. ಟಿ. ಕೆ. ಉದ್ಘಾಟಿಸಿದರು.

ಎರ್ನಾಕುಲಂ, ಮುಹಮ್ಮ, ಕೊಟ್ಟಾಯಂ, ಕೊಲ್ಲಂ, ಪಾಲಘಾಟ್ ಜಿಲ್ಲೆಗಳಲ್ಲೂ ವಿವಿಧ ಕಾರ್ಯಕ್ರಮಗಳೊಂದಿಗೆ ಎ. ಕೆ. ಜಿ. ವರ್ಧಂತಿಯನ್ನು ಆಚರಿಸಿದರು.

●

ಅರಮೇರಿಯಲ್ಲಿ ಎ. ಕೆ. ಜಿ. ದಿನಾಚರಣೆ

ಕೊಡಗು ಜಿಲ್ಲೆಯ ಅರಮೇರಿಯಲ್ಲಿ 23-3-80 ರಂದು ಎ. ಕೆ. ಜಿ. ದಿನವನ್ನು ಆಚರಿಸಲಾಯಿತು. ಬೆಳಗ್ಗೆ ಪ್ರಭಾತ್‌ಫೇರಿಯ ನಂತರ ಸಂಜೆ ಬಹಿರಂಗ ಸಭೆ ನಡೆಯಿತು. ವೀರಾಜಪೇಟೆಯ ವಕೀಲರಾದ ಸಿ. ಎಚ್. ಕರುಣಾಕರನ್ ಅಧ್ಯಕ್ಷತೆ ವಹಿಸಿದ್ದರು. ಕೆ. ಎ. ಮುತ್ತಪ್ಪ ಅವರು ಸ್ವಾಗತಿಸಿದರು. ಎ. ಕೆ. ಜಿ. ಕ್ಲಬ್ಬಿನ ಸದಸ್ಯರು ಕ್ರಾಂತಿಗೀತೆಗಳನ್ನು ಹಾಡಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ವಿ. ಜೆ. ಕೆ. ನಾಯರ್, ವೀರಾಜಪೇಟೆಯ ವಕೀಲರಾದ ಪ್ರಮೋದ್ ಅವರು, ಎ. ಕೆ. ಜಿ. ಕ್ಲಬ್ಬಿನ ಸದಸ್ಯ ಎಚ್. ಎನ್. ಗಣೇಶ ಅವರ ಎ. ಕೆ. ಜಿ ಅವರು ಜೀವನದ ವಿಚಾರ ಮಾತನಾಡಿದರು.

●

ಗುರಿ ಮುಟ್ಟುವ ತನಕ ಹೋರಾಡಲು ಕರೆ

ಏಪ್ರಿಲ್ 2ರಂದು ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಸತ್ಯಾಗ್ರಹ ಶಿಬಿರದಲ್ಲಿ ತಾತಗುಣಿ ಎಸ್ಟೇಟ್ ಕಾರ್ಮಿಕರನ್ನುದ್ದೇಶಿಸಿ ಎಸ್. ಎಫ್. ಐ. ಅಖಿಲ ಭಾರತ ಅಧ್ಯಕ್ಷರಾದ ಕಾಂ. ಎಂ. ಎ. ಬೇಬಿಯವರು ಬೆಂಬಲ ಕೋರಿ ಮಾತನಾಡಿದರು. ಎಸ್. ಎಫ್. ಐ. ರಾಜ್ಯಸಮಿತಿ ಸಭೆಗೆ ಅವರು ಬೆಂಗಳೂರಿಗೆ ಆಗಮಿಸಿದ್ದರು. ಕಾರ್ಮಿಕರು ತಮ್ಮ ನ್ಯಾಯಬದ್ಧ ಬೇಡಿಕೆಗಳನ್ನು ಪಡೆಯಬೇಕಾದರೆ ದೀರ್ಘ ಕಾಲದ ಮತ್ತು ದಿಟ್ಟ ಹೋರಾಟವನ್ನು ನಡೆಸಲು ತಯಾರಿರಬೇಕೆಂಬುದು ಒಂಬತ್ತು ತಿಂಗಳ ಚಾರಿತ್ರಿಕ ಹೋರಾಟ ನಡೆಸುತ್ತಿರುವ ನೀವು ತಿಳಿದಿದ್ದೀರಿ. ಇಂತಹ ಹೋರಾಟಗಳನ್ನು ಮುರಿಯಲು ಭೂಮಾಲೀಕರ ಮತ್ತು ಬಂಡವಾಳಗಾರರ ಪರವಾದ ಸರ್ಕಾರ ಪೋಲೀಸ್ ಯಂತ್ರವನ್ನು ಉಪಯೋಗಿಸಿಕೊಳ್ಳುತ್ತಿದೆ. ಇನ್ನೊಂದೆಡೆ ಮಾಲೀಕರ ಬಾಡಿಗೆ ಗೂಂಡಾಗಳು. ಈ ದಾಳಿ ದಬ್ಬಾಳಿಕೆಗಳನ್ನು ಎದುರಿಸಿ ಗುರಿ ಮುಟ್ಟುವ ತನಕ ಹೋರಾಡುತ್ತೀರೆಂಬ ನಂಬಿಕೆಯಿದೆ. ಇದಕ್ಕೆ ಸಮಾಜದ ಎಲ್ಲ ವಿಭಾಗಗಳ ಜನರೂ ಬೆಂಬಲ ನೀಡುತ್ತಿರುವಂತೆ ವಿದ್ಯಾರ್ಥಿಗಳ ಸಂಘವಾದ ಭಾರತ ವಿದ್ಯಾರ್ಥಿ ಫೆಡರೇಷನ್ ಪರವಾಗಿ ಪೂರ್ಣ ಬೆಂಬಲ ನೀಡುತ್ತೇವೆ ಎಂದು ಹೇಳಿದರು. ಎಸ್. ಎಫ್. ಐ. ಕೇಂದ್ರ ಸಮಿತಿಯ ಪರವಾಗಿ 25ರೂ.ಗಳ ಸಾಂಕೇತಿಕ ಕಾಣಿಕೆಯನ್ನು ಸಲ್ಲಿಸಿದರು. ಕಾಂ. ಬೇಬಿಯವರ ಇಂಗ್ಲೀಷ್ ಭಾಷಣವನ್ನು ಎಸ್. ಆರ್. ಆರಾಧ್ಯ ಕನ್ನಡಕ್ಕೆ ಅನುವಾದಿಸಿದರು.

O

ಆಂಧ್ರಪ್ರದೇಶದಲ್ಲಿ ಎಸ್ ಎಫ್ ಐ ಸಮ್ಮೇಳನ

ಆಂಧ್ರಪ್ರದೇಶ ಭಾರತ ವಿದ್ಯಾರ್ಥಿ ಫೆಡರೇಶನ್ನಿನ ನಾಲ್ಕನೇ ರಾಜ್ಯ ಸಮ್ಮೇಳನವು ಮಾರ್ಚಿ 1 ಮತ್ತು 2 ರಂದು ವಿಜಯವಾಡದಲ್ಲಿ ಜರುಗಿತು. ವಿದ್ಯಾರ್ಥಿ ಸಮುದಾಯದ ಸದ್ಯದ ಸಮಸ್ಯೆಗಳನ್ನು ಕುರಿತು ಚರ್ಚಿಸಲು 400 ಪ್ರತಿನಿಧಿಗಳು ಇದಕ್ಕೆ ಬಂದಿದ್ದರು. ರ್‍ಯಾಲಿಯಲ್ಲಿ 10,000 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸರ್ವಾಧಿಕಾರ, ನಕ್ಸಲ್‌ವಾದ ಮುಂತಾದ್ದರ ವಿರುದ್ಧವಾಗಿ ಹೋರಾಡಲು ಹೆಚ್ಚು ಹೆಚ್ಚು ವಿದ್ಯಾರ್ಥಿಗಳನ್ನು ಸಂಘಟಿಸುವ ಅಗತ್ಯವನ್ನು ಸಮ್ಮೇಳನದಲ್ಲಿ ಒತ್ತಿ ಹೇಳಲಾಯಿತು. ನಂತರ 42 ಸದಸ್ಯರ ರಾಜ್ಯಸಮಿತಿಯನ್ನು ಏಳು ಸದಸ್ಯರ ಸೆಕ್ರೆಟೇರಿಯೆಟ್ ಅನ್ನು ಚುನಾಯಿಸಲಾಯಿತು.

●

ಪೋಲೀಸರಿದ್ದಾರೆ ಎಚ್ಚರಿಕೆ !!

(ಒಂದನೇ ಪುಟದಿಂದ)

(ಯು)ನಿಂದ ಕಾಂಗ್ರೆಸ್‌ಗೆ ಪಕ್ಷಾಂತರಗೊಂಡಿದ್ದಾರೆ. ಬಹುಶಃ ಆಡಳಿತ ಪಕ್ಷಕ್ಕೆ ಸೇರಿದವನೆಂಬ ಕಾರಣದಿಂದ ಪೋಲೀಸರಿಗೆ ಅವನ ಮೇಲೆ ಕ್ರಮ ತೆಗೆದುಕೊಳ್ಳಲು ಮನಸ್ಸು ಹಿಂಜರಿದಿರಬಹುದೇ? ಇಪ್ಪತ್ತೇಳು ಗುಂಟೆ ಜಮೀನಿಗಾಗಿ ನಾನಾ ರೀತಿಯ ಕಿರುಕುಳಗಳನ್ನು ಶೇಷಗಿರಿಯಪ್ಪ ಪಡೆದಿದ್ದು ಮಾತ್ರವಲ್ಲದೆ 1979ರ ಆಗಸ್ಟ್ 6ರಂದು ಅವನ 19 ವರ್ಷದ ವಿಧವೆ ಮಗಳು ಅನಸೂಯಮ್ಮ ಅತ್ಯಾಚಾರಕ್ಕೆ ಬಲಿಯಾಗಬೇಕಾಯಿತು.

ಜಿಲ್ಲಾಧಿಕಾರಿಗಳು, ಪೋಲೀಸರು, ಮಂತ್ರಿ ಮಹನೀಯರು ಕೋಲಾರದ ಯುವಕರು, ಮಹಿಳೆಯರು ಪ್ರತಿಭಟನಾ ಪ್ರದರ್ಶನ ನಡೆಸಿದರೂ ತಮ್ಮ ಪ್ರಪಂಚದಲ್ಲಿಯೇ ತಾವು ಉಳಿದರು.

ಊರು ಸೂರೆ ಹೋದ ಮೇಲೆ ಕೋಟೆ ಬಾಗಿಲು ಹಾಕಿದಂತೆ, ಇಪ್ಪತ್ತನಾಲ್ಕು ಗಂಟೆಯೊಳಗಾಗಿ ಆರೋಪಿಗಳನ್ನು ಬಂಧಿಸಬೇಕೆಂದು ಐ.ಜಿ.ಪಿ.ಯವರು ಆಜ್ಞೆ ಹೊರಡಿಸಿದ್ದಾರೆ. ಆದರೆ ನಾಲ್ಕೈದು ದಿನಗಳಾದರೂ ಪೋಲೀಸರು ಕೇವಲ ಕೆಲವರನ್ನು ಮಾತ್ರ ಹುಡುಕಲು ಸಾಧ್ಯವಾಗಿದೆಯಂತೆ. ಪೋಲೀಸರ ಕರ್ತವ್ಯ ನಿಷ್ಠೆಗೆ ಭೇಷ್ ಎನ್ನಬೇಕು.

ಇದಕ್ಕೆ ಮೊದಲು ಏಪ್ರಿಲ್ 3ನೇ ತಾರೀಖು ಕೋಲಾರದಿಂದ 14ಕಿ.ಮೀ ದೂರದಲ್ಲಿರುವ ಮಣಿಘಟ್ಟ ಗ್ರಾಮದ ದಲಿತ ಕೃಷಿ ಕಾರ್ಮಿಕನಾದ ಮುಳುವಾಗಿಲಪ್ಪ ಎಂಬುವನ ಕೊಲೆಯಾಗಿದೆ. ಕೊಲೆಗೆ ಕಾರಣ, ವಿವರಗಳನ್ನು ಹುಡುಕುವುದರಲ್ಲಿ ಪೋಲೀಸರು ತಲ್ಲೀನರಾಗಿದ್ದಾರೆ.

ಪೋಲೀಸರು, ಪೋಲೀಸರೇ ಅವರಲ್ಲಿ ಮಹಿಳಾ ಸಬ್-ಇನ್‌ಸ್ಪೆಕ್ಟರಿಗೂ, ಪುರುಷ ಇನ್‌ಸ್ಪೆಕ್ಟರಿಗೂ ವ್ಯತ್ಯಾಸವಿಲ್ಲ. ಏಕೆಂದರೆ ಯಾರಿಗೂ ಮನುಷ್ಯತ್ವವಿಲ್ಲ. ಮಾರ್ಚಿ 27ರಂದು ತಿಮ್ಮೇನಹಳ್ಳಿಯ ಸುಜಾತ ಎಂಬ 25 ವರ್ಷದ ಮಹಿಳೆ, ತಮ್ಮ ಗೆಳತಿಯ ಮೇಲೆ ಅಪರಿಚಿತರು ಹಲ್ಲೆ ನಡೆಸಿದರೆಂದು ಉಪ್ಪಾರಪೇಟೆ ಪೋಲೀಸ್ ಠಾಣೆಗೆ ದೂರು ಕೊಡಲು ಹೋದಾಗ ಆಕೆಯ ಕೈಗಳೆರಡನ್ನೂ ಕಟ್ಟಿ, ಕ್ಷೌರಿಕನಿಂದ ತಲೆ ಬೋಳಿಸಿದ್ದಾರೆ. ಸಬ್‌ಇನ್‌ಸ್ಪೆಕ್ಟರ್ ಅಂಡಾಳಮ್ಮ ಆಕೆಯನ್ನು ದನಕ್ಕೆ ಬಡಿದಂತೆ ಬಡಿದು ರಾತ್ರಿ ಹತ್ತು ಗಂಟೆಯ ನಂತರ ಹೊರಗೆ ಕಳಿಸಿದ್ದಾರೆ. ಫಿರ್ಯಾದು ಮಾಡಲು ಹೋಗುವವರಿಗೆ ಸ್ಟೇಷನ್‌ನಲ್ಲಿ ತಲೆ ಬೋಳಿಸಬೇಕೆಂಬ ಅಜ್ಞಾತ ಆದೇಶ ಪೋಲೀಸರಿಗ ಯಾರು ಕೊಟ್ಟರು ಎಂಬುದನ್ನು ಜನತೆ ವಿಚಾರಿಸಬೇಕಾಗಿದೆ.

ತಲೆ ಬೋಳಿಸುವ ಕೆಲಸಕ್ಕಿಂತ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವವರು ಚಿಕ್ಕಮಗಳೂರಿನ ಪೋಲೀಸರು. ಮಾರ್ಚಿ ಹದಿನೈದರಂದು ಕಾರ್ಮಿಕ ಸಂಘಕ್ಕೆ ಸೇರಿದರೆಂಬ ಕಾರಣದಿಂದ, ಚಿಕ್ಕಮಗಳೂರಿನ ಸಮೀಪದ ಎಸ್ಟೇಟ್ ಒಂದರ ಮಾಲೀಕನ ಮಗ ಪೋಲೀಸರ ಎದುರಿನಲ್ಲಿಯೇ ಇಬ್ಬರು ಅವಿವಾಹಿತ ಯುವತಿಯರ ಮೇಲೆ ಅತ್ಯಾಚಾರ ನಡೆಸಿ, ಪುರುಷ ಕಾರ್ಮಿಕರ ಮೇಲೆ ಕಳುವಿನ ಆರೋಪ ಹೊರೆಸಿ ಬಂಧಿಸಿದ್ದಾರೆ. ಎಷ್ಟಾದರೂ ಘನ ಸರ್ಕಾರದ ಘನ ನ್ಯಾಯಪಾಲಕರಲ್ಲವೇ ಅವರು!

ಇಷ್ಟಲ್ಲದೆ ಪೋಲೀಸರ ವಶದಲ್ಲಿ ಸತ್ತ ಬಾಬಾ ಲಕ್ಷ್ಮಣಗಿರಿಯ ಸಾವು ಇನ್ನೂ ಚಿದಂಬರ ರಹಸ್ಯವಾಗಿ ಉಳಿದಿದೆ. ಸಂಪಂಗಿರಾಮನಗರದ ನರಸಮ್ಮನ ಸಾವು ಸಹಜ ಮರಣವೇ? ಅಥವಾ ಪೋಲೀಸರ ಕೃಪೆಯೇ? ಎಂಬ ಸತ್ಯ ಸಂಗತಿ ಇನ್ನೂ ತಿಳಿಯಬೇಕಾಗಿದೆ.

ಪೋಲೀಸರು ಜನತೆಯ ರಕ್ಷಕರಾಗುವ ಬದಲು, ಭಕ್ಷಕರಾಗುತ್ತಿರುವುದಕ್ಕೆ ಸದ್ಯ ಅಧಿಕಾರದಲ್ಲಿರುವ ಶ್ರೀ ಗುಂಡೂರಾಯರ ಸರಕಾರವೇ ನೇರ ಕಾರಣವಾಗಿದೆ. ಇಂತಹ ಅನ್ಯಾಯ, ದಬ್ಬಾಳಿಕೆಗಳ ವಿರುದ್ಧ ಜನತೆ ಎಚ್ಚೆತ್ತು ಪ್ರತಿಭಟಿಸದಿದ್ದರೆ ಪ್ರತಿ ಪೋಲೀಸು ಠಾಣೆಯ ಮುಂದೆಯೂ "ಪೋಲೀಸರಿದ್ದಾರೆ ಎಚ್ಚರಿಕೆ" ಎಂಬ ನಾಮಫಲಕವನ್ನು ಸರಕಾರವೇ ಹಾಕಬೇಕಾದೀತು ಎಚ್ಚರಿಕೆ!!!

○

ಕಾನೂನು ಮತ್ತು ಶಿಸ್ತಿನ ಸಮಸ್ಯೆ ಇರುವುದು ಕೇರಳದಲ್ಲಲ್ಲ

(ಒಂದನೇ ಪುಟದಿಂದ)

ದೇಶದ ಕಾರ್ಮಿಕ ವರ್ಗ, ಎಲ್ಲಾ ದುಡಿಯುವ ಜನತೆ ಮತ್ತು ಪ್ರಜಾಪ್ರಭುತ್ವಶಕ್ತಿಗಳು ಒಂದಾಗಿ ಸರ್ವಾಧಿಕಾರಿ ಮತ್ತು ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಲು ಕರೆ ಇತ್ತ ಕಾಂ. ನಯನಾರ್ ಅವರು, ನಾವು ಈ ಶಕ್ತಿಗಳನ್ನು ಹಿಮ್ಮೆಟ್ಟಿಸದಿದ್ದಲ್ಲಿ ಸ್ವಾತಂತ್ರ್ಯ, ಪ್ರಜಾಪ್ರಭುತ್ವವನ್ನು ಉಳಿಸಿ ಸಮಾಜವಾದದತ್ತ ಹೋಗುವುದು ಅಸಾಧ್ಯ ಎಂದರು. ಕರ್ನಾಟಕ ರಾಜ್ಯದಲ್ಲೂ ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ರಾಷ್ಟ್ರದಾದ್ಯಂತ ಒಂದು ಬಡಲಿಯನ್ನು ಕಟ್ಟುವುದರಲ್ಲಿ ಮುಂದಾಗಲು ಕಾಂ. ಇ. ಕೆ. ನಯನಾರ್ ಕರೆ ಇತ್ತರು.

ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದ ಕಾಂ. ಸೂರ್ಯನಾರಾಯಣ ರಾವ್ ಅವರು ರಾಷ್ಟ್ರದಾದ್ಯಂತ ಎಡ ಪ್ರಜಾಪ್ರಭುತ್ವ ಬದಲಿಯನ್ನು ಕಟ್ಟುವುದಕ್ಕೆ ಮುಂದಾಗಲು ಕಾರ್ಮಿಕ ವರ್ಗಕ್ಕೆ ಕರೆ ಇತ್ತರು. ಕಾಂ. ಇ.ಕೆ. ನಯನಾರ್ ಅವರ ಇಂಗ್ಲೀಷಿನ ಭಾಷಣವನ್ನು ಕಾಂ. ಪಿ. ರಾಮಚಂದ್ರರಾವ್ ಅವರು ಕನ್ನಡಕ್ಕೆ ಭಾಷಾಂತರಿಸಿದ್ದರು. ಸಿ. ಐ. ಟಿ. ಯು. ಜಿಲ್ಲಾ ಸಮಿತಿಗೆ ಹೊಸದಾಗಿ ಚುನಾಯಿತರಾಗಿರುವ ಪ್ರಧಾನ ಕಾರ್ಯದರ್ಶಿ ಕಾಂ. ಮೂಸಬ್ಬನವರು ಸ್ವಾಗತಿಸಿದ್ದರು. ಸಭೆಗೆ ಮೊದಲು ನಗರದ ನಾನಾ ಮೂಲೆಗಳಿಂದ ಹೊರಟ ಕಾರ್ಮಿಕ ಮತ್ತು ರೈತರ ಮೆರವಣಿಗೆಗಳು ಒಂದಾಗಿ ಸೇರಿ ಬೃಹತ್ ಮೆರವಣಿಗೆಯ ಮೂಲಕ ನೆಹರೂ ಮೈದಾನವನ್ನು ಸೇರಲಾಯಿತು, ಸುಮಾರು ಹತ್ತು ಸಹಸ್ರ ಜನರಿಂದ ಸೇರಿದ್ದ ಮೆರವಣಿಗೆಯು ಒಂದು ಅಭೂತಪೂರ್ವ ದೃಶ್ಯವಾಗಿತ್ತು.

ಬಜ್ಪೆ ವಿಮಾನ ನಿಲ್ದಾಣಕ್ಕೆ ಸಂಜೆ 3-40 ಕ್ಕೆ ಆಗಮಿಸಿದ ಮುಖ್ಯಮಂತ್ರಿಯವರಿಗೆ ಹಾರ್ದಿಕ ಸ್ವಾಗತ ನೀಡಲಾಯಿತು. ವಿಮಾನ ನಿಲ್ದಾಣದಲ್ಲಿಯೇ ಸುಮಾರು ಒಂದು ಸಹಸ್ರ ಜನ ಸೇರಿದ್ದರು. ವಿಮಾನ ನಿಲ್ದಾಣದಿಂದ ನೇರವಾಗಿ "ಹೊಸ ಬಂದರ"ಕ್ಕೆ ಹೋಗಿ ಅಲ್ಲಿ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿಯವರು, ಸಂಘಟಿತರಾಗಿ ಹೋರಾಡಲು ಕರೆ ಇತ್ತರು. ಕಾರ್ಮಿಕರು ಕೊಟ್ಟ ಹಲವು ಮನವಿಗಳನ್ನು ಸ್ವೀಕರಿಸಿದ ಮುಖ್ಯಮಂತ್ರಿ ಅವರು, ಮನವಿಗಳಿಂದಲೇ ಏನೂ ಆಗಲಾರದು, ಬದಲು ಸಂಘಟಿತ ಹೋರಾಟ ಅವಶ್ಯವೆಂದರು. ಚೀಫ್ ಎಂಜಿನೀಯರ್ ಅವರು ಮುಖ್ಯಮಂತ್ರಿಯವರನ್ನು ಬಂದರದ ಒಳಗೆ ಕರಕೊಂಡು ಹೋಗಿ, ಚಾ ಇತ್ತು ಸತ್ಕರಿಸಿದರು.

○

ದೌರ್ಜನ್ಯದ ವಿರುದ್ಧ ೧೪ರಂದು ಪ್ರತಿಭಟನೆ

ಕೋಲಾರ ಜಿಲ್ಲೆಯ ಮಾಲೂರಿನ ಹುಣಸೆಕೋಟೆಯ ಕುಂಬಾರ ಶೇಷಗಿರಿಯಪ್ಪನವರನ್ನು ಭೂಮಾಲೀಕ ಗೂಂಡಾಗಳು ಅಮಾನುಷವಾಗಿ ಕೊಲೆ ಮಾಡಿದ್ದನ್ನು ಮತ್ತು ಪೋಲೀಸರು ರಕ್ಷಣೆ ಕೊಡುವುದರಲ್ಲಿ ವಿಫಲರಾಗಿದ್ದನ್ನು ಹಾಗೆಯೇ ಇತ್ತೀಚೆಗೆ ನಡೆದಿರುವ ಇದೇ ರೀತಿಯ ದೌರ್ಜನ್ಯಗಳನ್ನು ಪ್ರತಿಭಟಿಸಿ 14-4-80 ರಂದು ರಾಜ್ಯದಾದ್ಯಾಂತ ಸಭೆ ಮೆರವಣಿಗೆಗಳನ್ನು ನಡೆಸಲು ನಾನಾ ಸಂಘಟನೆಗಳ ಪ್ರತಿನಿಧಿಗಳಿಂದ ಸೇರಿದ ದೌರ್ಜನ್ಯ ವಿರೋಧಿ ಸಮನ್ವಯ ಸಮಿತಿಯು ತೀರ್ಮಾನಿಸಿದೆ. 14 ರಂದು ಪ್ರಾರಂಭವಾಗುವ ಈ ಹೋರಾಟವನ್ನು ದೀರ್ಘಕಾಲ ನಡೆಸಲು ತೀರ್ಮಾನಿಸಲಾಗಿದೆ. ಸರಕಾರದ ವೈಫಲ್ಯ, ಅಧಿಕಾರಿಗಳ ಮೋಸ ಮತ್ತು ಭೂಮಾಲೀಕರ ದೌರ್ಜನ್ಯವನ್ನು ಬಯಲಿಗೆಳೆದು ರಾಜ್ಯದಾದ್ಯಂತ ಜನತೆಯನ್ನು ಎಚ್ಚರಿಸುವುದು ಅವಶ್ಯವಾಗಿದೆ. 14 ರಂದು ಸಂಜೆಗೆ ಬೆಂಗಳೂರಲ್ಲಿ ಮೆರವಣಿಗೆ ಮೂಲಕ ಹೋಗಿ ಮುಖ್ಯಮಂತ್ರಿಯವರಿಗೆ ಮನವಿ ಕೊಡಲಾಗುವುದು. ಮನವಿಯಲ್ಲಿ ಭೂಮಾಲೀಕರ ಕೈಯಲ್ಲಿರುವ ಶಸ್ತ್ರಾಸ್ತ್ರಗಳನ್ನು ಹಿಂದೆಗೆದುಕೊಳ್ಳಬೇಕು, ದಲಿತರಿಗೆ ರಕ್ಷಣೆ ಇಲ್ಲವೆ ಆಯುಧ ಕೊಡಬೇಕು, ದಲಿತರಿಂದ ಕಸಿಯಲ್ಪಟ್ಟಿರುವ ಭೂಮಿಯನ್ನು ಮತ್ತೆ ಅವರಿಗೇ ಕೊಡಿಸಬೇಕೆಂಬಿತ್ಯಾದಿ ಬೇಡಿಕೆಗಳಿರುವುವು. ನಗರದಲ್ಲಿ ಸಂಜೆ ಜರಗಲಿರುವ ಬಹಿರಂಗ ಸಭೆಯಲ್ಲಿ ದಲಿತ ಸಂಘರ್ಷ ಸಮಿತಿಯ ಸಿದ್ಧಲಿಂಗಯ್ಯ, ಸಿ. ಪಿ. ಐ. (ಮಾರ್ಕ್ಸಿಸ್ಟ್) ಪರವಾಗಿ ಎಂ. ಕೆ. ಭಟ್, ದುಡಿಯುವ ಮಹಿಳೆಯರ ಪರವಾಗಿ ಮಾಲತಿ, ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ, ಸಿ. ಪಿ. ಐ.ನ ಪ್ರತಿನಿಧಿ ಹಾಗೂ ಮತ್ತಿತರರು ಭಾಷಣ ಮಾಡಲಿರುವರು.

ಮಾರ್ಕ್ಸಿಸ್ಟ್ ಪಕ್ಷದಿಂದ ಖಂಡನೆ :

ಕುಂಬಾರ ಶೇಷಗಿರಿಯಪ್ಪನವರನ್ನು ಅಮಾನುಷವಾಗಿ ಕೊಲೆಗೈದುದನ್ನು ಖಂಡಿಸಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಸಮಿತಿ ಕಾರ್ಯದರ್ಶಿ ಎಂ. ಕೆ. ಭಟ್ ಅವರು ದೌರ್ಜನ್ಯದ ವಿರುದ್ಧ ಒಂದಾಗಿ ಚಳುವಳಿ ಹೂಡಲು ಎಡ ಪ್ರಜಾಪ್ರಭುತ್ವ ಶಕ್ತಿಗಳಿಗೂ, ದಲಿತ ಸಂಘರ್ಷ ಸಮಿತಿಯಂತಹ ಹೋರಾಟಗಾರ ಸಂಘಟನೆಗಳಿಗೂ ಕರೆ ಇತ್ತಿರುವರು. ಪಕ್ಷದ ಎಲ್ಲಾ ಘಟಕಗಳು ಮತ್ತು ಸಾಮೂಹಿಕ ಸಂಘಟನೆಗಳೂ ಪ್ರತಿಭಟನೆಯ ಧ್ವನಿಯನ್ನು ಎಬ್ಬಿಸಲು ಕಾಂ. ಎಂ. ಕೆ. ಯವರು ಕರೆ ಇತ್ತಿರುವರು.

○

ಮುಖ್ಯ ಮಂತ್ರಿಗಳ ಮನೆಯ ಮುಂದೆ ಉಪವಾಸ ಸತ್ಯಾಗ್ರಹ

ದೇವಿಕಾರಾಣಿ ರೋರಿಚ್‌ರವರ ಒಡೆತನಕ್ಕೆ ಸೇರಿದ ತಾತಗುಣಿ ಎಸ್ಟೇಟ್ ದಲಿತ ಕಾರ್ಮಿಕರು, ಎಸ್ಟೇಟನ್ನು ಪ್ಲಾಂಟೇಶನ್ ಕಾಯಿದೆಗೆ ಒಳಪಡಿಸಲು, ವಜಾ ಆದ ಹನ್ನೊಂದು ಜನ ಕಾರ್ಮಿಕರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಬೇಕು, ಹೆರಿಗೆ ಭತ್ಯ, ಕನಿಷ್ಠ ಕೂಲಿ ಜಾರಿ ಮುಂತಾದ ಬೇಡಿಕೆಗಳನ್ನಿಟ್ಟು ತಾ॥ 24-7-79 ರಿಂದ ಹೋರಾಟದಲ್ಲಿದ್ದಾರೆ. ಬೆಂಗಳೂರು ವಿಧಾನಸೌಧದ ಮುಂದೆ ನಾಲ್ಕು ತಿಂಗಳಿಂದ ಅನಿರ್ದಿಷ್ಟ ಕಾಲದ ಧರಣಿ ಮುಷ್ಕರ ನಡೆಸುತ್ತಿದ್ದಾರೆ.

ಎಸ್ಟೇಟನ್ನು ಪ್ಲಾಂಟೇಶನ್ ಕಾಯಿದೆಗೆ ಒಳಪಡಿಸಲು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿರುವುದಾಗಿ ತಾ॥ 9-3-80ರಂದು ಕಾರ್ಮಿಕ ಮಂತ್ರಿಗಳು ಹೇಳಿದ್ದಾರೆ. ಆದರೆ ಭರವಸೆ ಇನ್ನೂ ಜಾರಿಯಾಗಿಲ್ಲ. ಬದಲು ಪೋಲೀಸರು ಮುಷ್ಕರ ಮುರುಕರನ್ನು ಎಸ್ಟೇಟಿನ ಒಳಗೆ ತಂದು ಕೆಲಸ ಮಾಡಿಸಲು ಪ್ರಯತ್ನಿಸುತ್ತಿದ್ದಾರೆ.

ಆದ್ದರಿಂದ ಕಾರ್ಮಿಕರು ತಮ್ಮ ನ್ಯಾಯವಾದ ಬೇಡಿಕೆಗಳ ಈಡೇರಿಕೆಗಾಗಿ ಸರಕಾರದ ಮೇಲೆ ಒತ್ತಾಯ ತರಲು ತಾ॥ 22-4-80ನೇ ಮಂಗಳವಾರದಿಂದ ರಾಜ್ಯದ ಮುಖ್ಯಮಂತ್ರಿಗಳ ಮನೆಯ ಮುಂದೆ ಬೆಂಗಳೂರು ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿ, ಪಿ. ಜಗನ್ನಾಥ್ ನೇತೃತ್ವದಲ್ಲಿ ಅನಿರ್ದಿಷ್ಟ ಕಾಲದ ಉಪವಾಸ ಸತ್ಯಾಗ್ರಹ ಪ್ರಾರಂಭಿಸಲಿದ್ದಾರೆ.

ತಾ. 22-4-80ರಂದು ಬೆಳಗ್ಗೆ ಹತ್ತು ಗಂಟೆಗೆ ಕಬ್ಬನ್‌ಪಾರ್ಕ್‌ನಿಂದ ಮೆರವಣಿಗೆ ಹೊರಡುತ್ತದೆ. ಆದ್ದರಿಂದ ನಗರದ ಪ್ರಗತಿಪರರು, ವಿವಿಧ ಸಂಘ ಸಂಸ್ಥೆಗಳು, ವಿದ್ಯಾರ್ಥಿ ಯುವಜನತೆ ಎಲ್ಲಾ ರೀತಿಯ ಬೆಂಬಲ ನೀಡಿ ಸಹಕರಿಸಬೇಕೆಂದು ಕಾಂ. ಜಗನ್ನಾಥ್ ಕೋರಿದ್ದಾರೆ. ●

ಸಂಪಾದಕೀಯ

(ಒಂದನೇ ಪುಟದಿಂದ)

ಇಂದಿನ ಪರಿಸ್ಥಿತಿಯಲ್ಲಿ ಸರ್ವಾಧಿಕಾರಿ ಶಕ್ತಿಯನ್ನೆದುರಿಸಲು ಎಲ್ಲ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೂ ಪಕ್ಷಗಳೂ ಒಂದಾಗಬೇಕಾಗಿದೆ. ಮುಂಬರುವ ಒಂಬತ್ತು ರಾಜ್ಯಗಳ ಶಾಸನಸಭಾ ಚುನಾವಣೆಯಲ್ಲೂ ಇದು ಬಹಳ ಅಗತ್ಯವಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೂ, ಭಾರತೀಯ ಕಮ್ಯುನಿಸ್ಟ್ ಪಕ್ಷವೂ ಅರಸು ಕಾಂಗ್ರೆಸ್ ಜೊತೆಗೆ ಮಾತುಕತೆ ನಡೆಸಿದೆ. ಆದರೆ ಇತ್ತೀಚೆಗೆ ಲೋಕದಳದ ಚರಣ್‌ಸಿಂಗ್‌ರವರು ಕಮ್ಯುನಿಸ್ಟರನ್ನು ಟೀಕಿಸಿರುವುದು ಆಶ್ಚರ್ಯಕರವಾಗಿದೆ. ಅವರ ಕಮ್ಯುನಿಸ್ಟ್ ವಿರೋಧಿ ಟೀಕೆಯನ್ನು ಭಾರತೀಯ ಜನತಾಪಕ್ಷ ಸ್ವಾಗತಿಸಿರುವುದರಲ್ಲಿ ಆಶ್ಚರ್ಯವಿಲ್ಲ. ನಮ್ಮ ದೇಶದ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳೂ ಶಕ್ತಿಗಳೂ ಒಂದಾಗಿ ಜನತೆಯ ಸಮಸ್ಯೆಗಳನ್ನೆದುರಿಸಲು ಒಟ್ಟಿಗೆ ಹೋರಾಡುವರೆಂದು ಹಾರೈಸುತ್ತೇವೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 34154
EDITOR : M. K. BHAT